ಕರ್ನಾಟಕ ರಾಜ್ಯ ಪೊಲೀಸ್

KARNATAKA STATE POLICE

# ವಾರ್ತಾ ಪತ್ರಿಕೆ

NEWS LETTER

ಆಗಸ್ಟ್ 2020 ★★ AUGUST, 2020



ಕರ್ತವ್ಯ ನಿರ್ವಹಿಸುತ್ತಿರುವಾಗ ಕೋವಿಡ್–19ರ ವಿರುದ್ಧ ಹೋರಾಡಿ ಪ್ರಾಣ ಕಳೆದುಕೊಂಡ 38 ಮಂದಿ ಪೊಲೀಸರಿಗೆ ಭಾರವಾದ ಹೃದಯದಿಂದ ಅಶ್ರುತರ್ಪಣೆ ಸಲ್ಲಿಸುತ್ತಾ, ಗೌರವ ಸಲ್ಲಿಸುತ್ತಿದ್ದೇನೆ. ಅವರ ತ್ಯಾಗ ಮತ್ತು ಕರ್ತವ್ಯ ಪ್ರಜ್ಞೆಗೆ ಇಲಾಖೆ ಚಿರಋಣಿಯಾಗಿದೆ.

ಕರ್ನಾಟಕ ರಾಜ್ಯ ಪೊಲೀಸ್ ಸಂದೇಶ ಪತ್ರವನ್ನು (ನ್ಯೂಸ್ ಲೆಟರ್) ಪುನರಾರಂಭಿಸುವುದಕ್ಕೆ ನನಗೆ ತುಂಬಾ ಸಂತೋಷವಾಗುತ್ತಿದೆ. ಕಳೆದ ವರ್ಷ ತುಂಬಾ ಕರ್ತವ್ಯದೊತ್ತಡದಲ್ಲಿದ್ದೆವು. ಮೊದಲು ಭೀಕರ ಪ್ರವಾಹ ಪರಿಸ್ಥಿತಿ ಎದುರಾಗಿತ್ತು, ಆನಂತರ ಕೆಲವು ವಿಧಾನಸಭಾ ಕ್ಷೇತ್ರಗಳಿಗೆ ಉಪ–ಚುನಾವಣೆ ನಡೆಸಲಾಗಿತ್ತು, ತದನಂತರ ಆರ್ಟಿಕಲ್ 370 ಮತ್ತು ಸಿ.ಎ.ಎ. ಜಾರಿಗೊಳಿಸಲಾಯಿತು. ಸಿ.ಎ.ಎ. ವಿರುದ್ಧ ನಡೆದ ಪ್ರತಿಭಟನೆಯ ಕಾವು ತಣ್ಣಗಾಗುವುದರೊಳಗೆ ಕೋವಿಡ್–19 ಸೋಂಕು ಹರಡುವಿಕೆ ಪ್ರಾರಂಭವಾಯಿತು. ಕೋವಿಡ್–19 ವೈದ್ಯಕೀಯ ತುರ್ತುಸ್ಥಿತಿಯಾದರೂ, ಪೊಲೀಸ್ ಪಡೆಯ ಸಕ್ರಿಯ ಪಾತ್ರವಿಲ್ಲದೆ ಪರಿಸ್ಥಿತಿ ನಿಭಾಯಿಸಲು ಕಷ್ಟಸಾಧ್ಯವಿತ್ತು. ಇದೆಲ್ಲದರ ಜೊತೆಯಲ್ಲಿಯೇ ದೈನಂದಿನ ಪೊಲೀಸ್ ಕರ್ತವ್ಯಗಳಾದ ಅಪರಾಧ ತಡೆ ಮತ್ತು ಬಂದೋಬಸ್ತ್ ಕರ್ತವ್ಯಗಳನ್ನೂ ಸಹ ನಿಭಾಯಿಸಬೇಕಾಗಿತ್ತು.

ಸಕಾರಾತ್ಮಕ ದೃಷ್ಟಿಯಿಂದ, ಪೊಲೀಸರ ಕಾರ್ಯವೈಖರಿ ಮತ್ತು ಕೆಲಸದ ಸ್ಥಿತಿ–ಗತಿಗಳನ್ನು ಅತ್ಯಾಧುನಿಕವಾಗಿ ಸುಧಾರಿಸುವ ನಿಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯ ಉಪಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

- ಕಾನ್ಸ್‌ಟೇಬಲ್ ನಿಂದ ಡಿವೈಎಸ್‌ಪಿ ಹುದ್ದೆಯವರೆಗೆ ಯಾವುದೇ ಪೊಲೀಸ್ ಅಧಿಕಾರಿಗಳು ಬಡ್ತಿಗಾಗಿ ಇನ್ನು ಮುಂದೆ ಕಾಯುವ ಅಗತ್ಯವಿಲ್ಲ.
- ಕೆ.ಸಿ.ಎಸ್.ಆರ್. ನಿಯಮ 32 ರ ಅಡಿಯಲ್ಲಿ ನೀಡಲಾಗುತ್ತಿದ್ದ ಬಡ್ತಿಗೆ ಬದಲಾಗಿ, ಇನ್ನು ಮುಂದೆ, ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ ನೇರವಾಗಿ ಕೆ.ಸಿ.ಎಸ್.ಆರ್ ನಿಯಮ 42 ರಡಿಯಲ್ಲಿ ಬಡ್ತಿಯನ್ನು ನೀಡಲಾಗುವುದು.
- ಆಸ್ಪತ್ರೆಗಳಲ್ಲಿ ಬಾಕಿ ಉಳಿದಿದ್ದ ಆರೋಗ್ಯಭಾಗ್ಯ ಯೋಜನೆಗೆ ಸಂಬಂಧಿಸಿದ ಬಿಲ್‌ಗಳ ಬಾಕಿ ಮೊತ್ತವನ್ನು ಹಾಗೂ ಕಳೆದ ಒಂದು ವರ್ಷದಿಂದ ಬಾಕಿ ಉಳಿದಿದ್ದ ಪೊಲೀಸರ ಟಿಎ/ಡಿಎ ಮೊತ್ತವನ್ನು ಪಾವತಿಸಲು ಎಲ್ಲಾ ಅಗತ್ಯಕ್ರಮ ಕೈಗೊಳ್ಳಲಾಗಿದೆ.
- ಪೊಲೀಸ್ ಸಿಬ್ಬಂದಿಗಳಿಗೆ ಇನ್ನು ಮುಂದೆ ಉತ್ತಮ ಗುಣಮಟ್ಟದ ಸಮವಸ್ತ್ರವನ್ನು ಪೂರೈಸಲು ಕ್ರಮಕೈಗೊಳ್ಳಲಾಗಿದೆ.
- ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಮತ್ತೊಂದು ದಿಟ್ಟ ಹೆಜ್ಜೆಯನ್ನು ಇಡಲಾಗಿದೆ. ಅದೇನೆಂದರೆ, ಕೆ.ಎಸ್.ಆರ್.ಪಿ/ ಕೆ.ಎಸ್.ಐ.ಎಸ್.ಎಫ್/ ಸಿ.ಎ.ಆರ್/ ಡಿ.ಎ.ಆರ್ ಘಟಕಗಳಿಂದ ಪೊಲೀಸ್ ಸಿಬ್ಬಂದಿಗಳಿಗೆ ಘಟಕ ಬದಲಾಯಿಸುವ ಅವಕಾಶ (lateral movement) ವನ್ನು ನೀಡಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಖಾಲಿಯಿರುವ ಕಾನ್ಸ್‌ಟೇಬಲ್ ಹಾಗೂ ಪಿ.ಎಸ್.ಐ ಹುದ್ದೆಗಳನ್ನು ಭರ್ತಿ ಮಾಡಲು ಬೃಹತ್ ಮಟ್ಟದ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ. ಕೆ.ಎಸ್.ಆರ್.ಪಿಗೆ ತ್ವರಿತ ಗತಿಯಲ್ಲಿ ನೇಮಕಾತಿ ಮಾಡಿಕೊಳ್ಳಲು, ವೇಯ್ಟಿಂಗ್ ಲಿಸ್ಟ್‌ನ ಅವಕಾಶದೊಂದಿಗೆ, ಪಿಇಟಿ/ಪಿಎಸ್‌ಟಿಗೆ ಮೊದಲೇ ಲಿಖಿತ ಪರೀಕ್ಷೆಯನ್ನು ನಡೆಸುವಂತೆ, ಸಿ & ಆರ್ ನಿಯಮಗಳಲ್ಲಿ ಸೂಕ್ತ ಬದಲಾವಣೆ ಮಾಡಲಾಗಿದೆ. ಇದೇ ತರಹದ ಬದಲಾವಣೆಯನ್ನು ಕೆ.ಎಸ್.ಐ.ಎಸ್.ಎಫ್. ನೇಮಕಾತಿ ಪ್ರಕ್ರಿಯೆಯಲ್ಲೂ ಅಳವಡಿಸಲಾಗಿದೆ.

ಪೊಲೀಸ್ ಕರ್ತವ್ಯ ನಿರ್ವಹಣೆಯಲ್ಲಿ ಅಧಿಕಾರಿಗಳ ಮಹತ್ವವನ್ನು ಇಮ್ಮಡಿಗೊಳಿಸಲು, ರಾಜ್ಯದ ಪ್ರತಿಯೊಂದು ಪೊಲೀಸ್ ಠಾಣೆಗಳಲ್ಲೂ ಕನಿಷ್ಠ ಇಬ್ಬರು ಸಬ್–ಇನ್ಸ್‌ಪೆಕ್ಟರ್‌ಗಳನ್ನು ಒದಗಿಸಲಾಗಿದೆ.

## ರಾಜ್ಯ ಪೊಲೀಸ್ ಪಡೆಯ ಮುಖ್ಯಸ್ಥರಾಗಿ ಶ್ರೀ ಪ್ರವೀಣ್ ಸೂದ್ ರವರ ಅಧಿಕಾರ ಸ್ವೀಕಾರ



ದಿನಾಂಕ: 31/01/2020 ರಂದು ಶ್ರೀ ಪ್ರವೀಣ್ ಸೂದ್, ಐಪಿಎಸ್ ರವರು ಕರ್ನಾಟಕ ರಾಜ್ಯದ ನೂತನ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರಾಗಿ ನೇಮಕಗೊಂಡು ಶ್ರೀಮತಿ ನೀಲಮಣಿ ಎನ್.ರಾಜು ರವರಿಂದ ಪೊಲೀಸ್ ಪ್ರಧಾನ ಕಛೇರಿಯ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಿರುತ್ತಾರೆ.

ಕೆಲಸದೊತ್ತಡ ಬಹಳವಿರುವ ಕೆಲವು ಪೊಲೀಸ್ ಠಾಣೆಗಳಲ್ಲಿ (ಎಫ್.ಐ.ಆರ್. ದಾಖಲಾತಿ ಸಂಖ್ಯೆಯನ್ನಾಧರಿಸಿ) 4, 6 ಅಥವಾ 8 ಜನ ಸಬ್–ಇನ್ಸ್‌ಪೆಕ್ಟರ್‌ಗಳನ್ನು ಒದಗಿಸಲಾಗಿದೆ. ಇನ್ನು ಮುಂದೆ ಇಂತಹ ಪೊಲೀಸ್ ಠಾಣೆಗಳು ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿಯ ಮೇಲುಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸುತ್ತವೆ.

1000 ಕ್ಕೂ ಹೆಚ್ಚಿನ ಸಂಖ್ಯೆಯ ಹಳೆಯ ವಾಹನಗಳನ್ನು ನಿರುಪಯುಕ್ತಗೊಳಿಸಲಾಗಿದೆ. ಅವುಗಳ ಬದಲು 1500 ಹೊಸ ವಾಹನಗಳನ್ನು ಖರೀದಿಸುವ ಪ್ರಕ್ರಿಯೆ ಜಾರಿಯಲ್ಲಿದೆ.

ಶೀಘ್ರದಲ್ಲೇ ಪೊಲೀಸ್ ಇಲಾಖೆಯ ಎಲ್ಲಾ ಘಟಕಗಳಲ್ಲೂ ಪೆಟ್ರೋ–ಕಾರ್ಡ್‌ನ್ನು ಸಮರ್ಪಕವಾಗಿ ಬಳಸುವಂತೆ ಮಾಡಲು ಯೋಜನೆ ಸಿದ್ಧಗೊಳಿಸಲಾಗುತ್ತಿದೆ.

ಹಣಕಾಸಿನ ತುರ್ತುಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಶಾಶ್ವತ ಮುಂಗಡ ಹಣವನ್ನು ಎಲ್ಲಾ ಘಟಕಗಳಿಗೂ ಒದಗಿಸಲು ಕ್ರಮಕೈಗೊಳ್ಳಲಾಗಿದೆ.

ಪೊಲೀಸ್ ಕಟ್ಟಡಗಳು, ವಸತಿ ಮತ್ತು ವಸತಿಯೇತರ ಕಟ್ಟಡಗಳನ್ನು ದುರಸ್ತಿಗೊಳಿಸುವುದಕ್ಕೆ ಆದ್ಯತೆ ನೀಡಲಾಗಿದೆ.

ಮುಂದಿನ ದಿನಗಳಲ್ಲಿ ಕ್ಷೇಮಾಭಿವೃದ್ಧಿ ಹಾಗೂ ಸೇವೆಗೆ ಸಂಬಂಧಿಸಿದಂತೆ ಇನ್ನೂ ಅನೇಕ ಸೃಜನಾತ್ಮಕ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು. ಆದಾಗ್ಯೂ ಪ್ರಸ್ತುತ ಪರಿಸ್ಥಿತಿಯಲ್ಲಿ, ಪೊಲೀಸ್ ಕರ್ತವ್ಯ ನಿರ್ವಹಿಸುವಾಗ ಕೋವಿಡ್–19 ಗೆ ಸಂಬಂಧಿಸಿದಂತೆ ಆರೋಗ್ಯ ಕಾಪಾಡಿಕೊಳ್ಳುವ ಸಲುವಾಗಿ ಸುರಕ್ಷಾ ನಿಯಮಗಳನ್ನು ಪಾಲಿಸುವ ಜವಾಬ್ದಾರಿ ನಮ್ಮ–ನಿಮ್ಮೆಲ್ಲರ ಮೇಲಿರುತ್ತದೆ.

ನಾನು ಎಲ್ಲಾ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಮುಂದಿನ ದಿನಗಳು ಸುರಕ್ಷಿತವಾಗಿರಲಿ ಎಂದು ಹಾರೈಸುತ್ತೇನೆ.

**ಶುಭಾಶಯಗಳೊಂದಿಗೆ,**

(ಪ್ರವೀಣ್ ಸೂದ್)
ಡಿಜಿ ಮತ್ತು ಐಜಿಪಿ
ಕರ್ನಾಟಕ.



## ಮೂವರು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಬೀಳ್ಕೊಡುಗೆ

ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದಿದ ಪೊಲೀಸ್ ಮಹಾನಿರ್ದೇಶಕರುಗಳಾದ ಶ್ರೀಮತಿ ನೀಲಮಣಿ ಎನ್. ರಾಜು, ಶ್ರೀ ಎಂ.ಎನ್. ರೆಡ್ಡಿ ಹಾಗೂ ಶ್ರೀ ರಾಘವೇಂದ್ರ ಹೆಚ್. ಔರಾದ್‌ಕರ್ ರವರುಗಳಿಗೆ ಕೋರಮಂಗಲ ಕೆ.ಎಸ್.ಆರ್.ಪಿ. ಕವಾಯತು ಮೈದಾನದಲ್ಲಿ ದಿನಾಂಕ 31-01-2020 ರಂದು ಬೀಳ್ಕೊಡುಗೆ ಕವಾಯತು ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಡಾ॥ ರಜನೀಶ್ ಗೋಯೆಲ್, ಐ.ಎ.ಎಸ್. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು ಹಾಗೂ ಇಲಾಖೆಯ ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

## 2020ನೇ ಸಾಲಿನ ಆಗಸ್ಟ್‌ವರೆಗೆ ನಿವೃತ್ತರಾದ ಕರ್ನಾಟಕ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳು



**ಶ್ರೀಮತಿ ನೀಲಮಣಿ ಎನ್. ರಾಜು,** ಐ.ಪಿ.ಎಸ್.
ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು



**ಶ್ರೀ ಎಂ.ಎನ್. ರೆಡ್ಡಿ,** ಐ.ಪಿ.ಎಸ್.
ಪೊಲೀಸ್ ಮಹಾನಿರ್ದೇಶಕರು



**ಶ್ರೀ ರಾಘವೇಂದ್ರ ಹೆಚ್. ಔರಾದ್‌ಕರ್,** ಐ.ಪಿ.ಎಸ್.
ಪೊಲೀಸ್ ಮಹಾನಿರ್ದೇಶಕರು



**ಶ್ರೀ ಎನ್.ಎಸ್. ಮೇಘರಿಖ್,** ಐ.ಪಿ.ಎಸ್.
ಪೊಲೀಸ್ ಮಹಾನಿರ್ದೇಶಕರು



**ಶ್ರೀ ಸಂಜಯ್ ಸಹಾಯ್,** ಐ.ಪಿ.ಎಸ್.
ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು
(ಸ್ವಯಂ ನಿವೃತ್ತಿ)



**ಶ್ರೀ ಟಿ.ಆರ್. ಸುರೇಶ್,** ಐ.ಪಿ.ಎಸ್.
ಉಪ ಆರಕ್ಷಕ ಮಹಾನಿರೀಕ್ಷಕರು



**ಶ್ರೀ ಎಂ.ಎನ್. ನಾಗರಾಜ್,** ಐ.ಪಿ.ಎಸ್.
ಉಪ ಆರಕ್ಷಕ ಮಹಾನಿರೀಕ್ಷಕರು



**ಶ್ರೀ ಮಂಜುನಾಥ ಅಣ್ಣಿಗೇರಿ,** ಐ.ಪಿ.ಎಸ್.
ಉಪ ಆರಕ್ಷಕ ಮಹಾನಿರೀಕ್ಷಕರು



**ಶ್ರೀ ಪಿ.ರಾಜೇಂದ್ರ ಪ್ರಸಾದ್,** ಐ.ಪಿ.ಎಸ್.
ಉಪ ಆರಕ್ಷಕ ಮಹಾನಿರೀಕ್ಷಕರು

### ಓದುಗರಿಗೆ

ಪೊಲೀಸ್ ಇಲಾಖೆಯ ವತಿಯಿಂದ ಹೊರಬರುತ್ತಿರುವ 'ವಾರ್ತಾ ಪತ್ರಿಕೆ'ಗೆ ಘಟಕಾಧಿಕಾರಿಗಳು ತಮ್ಮ ಘಟಕಗಳಲ್ಲಿ, ಜಿಲ್ಲೆ / ನಗರಗಳಲ್ಲಿ ನಡೆದ ಪ್ರಮುಖ ಸಮಾರಂಭಗಳು / ನೂತನವಾಗಿ ಪ್ರಾರಂಭಿಸಲಾದ ಕಾರ್ಯಕ್ರಮಗಳು / ಕಾನೂನು ಸುವ್ಯವಸ್ಥೆ, ಸಿಬ್ಬಂದಿ ಸುಧಾರಣೆ, ಸಂಚಾರಕ್ಕೆ ಸಂಬಂಧಪಟ್ಟಂತಹ ಪ್ರಮುಖ ವಿಷಯಗಳು, ತಂತ್ರಜ್ಞಾನ, ನೂತನ ಉಪಕರಣಗಳ ಬಳಕೆ, ಶ್ಲಾಘನೀಯ ಸೇವೆ ಮಾಡಿದ ಸಿಬ್ಬಂದಿಗಳ ಉತ್ತಮ ಕಾರ್ಯ, ನಿವೃತ್ತರಾದ ಅಧಿಕಾರಿ / ಸಿಬ್ಬಂದಿಗಳ ಫೋಟೋಗಳೊಂದಿಗೆ **50 ರಿಂದ 150** ಪದಗಳೊಳಗೆ ವಿವರಗಳನ್ನು kspnewsletter@ksp.gov.in ಇ-ಮೇಲ್ ಐ.ಡಿ ಗೆ ಆಯಾ ತಿಂಗಳ ಅಂತ್ಯದೊಳಗೆ ಕಳುಹಿಸಬಹುದಾಗಿದೆ. ಸೂಕ್ತವಾದ ವರದಿಗಳನ್ನು ಪ್ರಕಟಿಸಲಾಗುವುದು. ಈ ವಾರ್ತಾ ಪತ್ರಿಕೆಯನ್ನು ಇನ್ನೂ ಉತ್ತಮ ಪಡಿಸಲು ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ತಮ್ಮ ಅನಿಸಿಕೆ ಹಾಗೂ ಅಭಿಪ್ರಾಯಗಳನ್ನು ಸಹ ಕಳುಹಿಸಬಹುದಾಗಿರುತ್ತದೆ.

## ಮಂಗಳೂರು ನಗರ ಪೊಲೀಸ್ ಆಯುಕ್ತರ ಕಛೇರಿಯಲ್ಲಿ ಬೆರಳು ಮುದ್ರೆ ಘಟಕ ಸ್ಥಾಪನೆ

ದಕ್ಷಿಣ ಕನ್ನಡ ಜಿಲ್ಲೆಯು ಕರಾವಳಿ ತೀರ ಪ್ರದೇಶವಾಗಿದ್ದು, ದಿನೇ ದಿನೇ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿದ್ದು, ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ಸಹಕಾರಿಯಾಗುವಂತೆ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 40 ಪಿಓಪಿ 2019 ದಿನಾಂಕ: 27.01.2020 ರಲ್ಲಿ ಮಂಗಳೂರು ನಗರದ ಪೊಲೀಸ್ ಆಯುಕ್ತರ ಕಛೇರಿಯಲ್ಲಿ ಬೆರಳು ಮುದ್ರೆ ಘಟಕವನ್ನು 01–ಪಿ.ಐ., 01–ಪಿಎಸ್ಐ ಮತ್ತು 02–ಪಿಸಿ ಹುದ್ದೆಗಳ ಮಂಜೂರಾತಿ ಬಲದೊಂದಿಗೆ ಸ್ಥಾಪಿಸಲು ಸರ್ಕಾರದ ಮಂಜೂರಾತಿ ನೀಡಲಾಗಿರುತ್ತದೆ.

## ಬೆಂಗಳೂರು ನಗರದಲ್ಲಿ 8 ಸಿಇಎನ್ ಪೊಲೀಸ್ ಠಾಣೆ ಸೃಜನೆ

ರಾಜ್ಯದಲ್ಲಿ ದಾಖಲಾಗುತ್ತಿರುವ ಸೈಬರ್ ಕ್ರೈಂ ಅಪರಾಧ ಪ್ರಕರಣಗಳಿಗೆ ಹೋಲಿಸಿದಲ್ಲಿ ಬೆಂಗಳೂರು ನಗರದಲ್ಲಿ ಶೇಕಡಾ 90% ಪ್ರಕರಣಗಳು ದಾಖಲಾಗುತ್ತಿದ್ದು, ಹೆಚ್ಚಿನ ಪ್ರಾಧಾನ್ಯತೆ ಇರುವ ಹಿನ್ನೆಲೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 29 ಪಿಓಪಿ 2019, ದಿನಾಂಕ: 16.12.2019 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 29 ಪಿಓಪಿ 2019, ದಿನಾಂಕ: 18.01.2020 ರಲ್ಲಿ 08 ***CEN (Cyber, Economic and Narcotics Crime Police Station)*** ಪೊಲೀಸ್ ಠಾಣೆಗಳ ಸರಹದ್ದು ನಿಗದಿಪಡಿಸಿ ಸೃಜಿಸಲಾಗಿರುತ್ತದೆ. ಪ್ರತಿ ಠಾಣೆಗೆ 01–ಪಿ.ಐ., 01–ಪಿಎಸ್ಐ, 03–ಪಿಸಿ ಮತ್ತು 02–ತಾಂತ್ರಿಕ ತಜ್ಞರು ಸೇರಿದಂತೆ ಒಟ್ಟು 07 ಹುದ್ದೆಗಳಂತೆ 08 ಸಿಇಎನ್ ಪೊಲೀಸ್ ಠಾಣೆಗಳಿಗೆ ಒಟ್ಟು 56 ಹುದ್ದೆಗಳನ್ನು ಬೆಂಗಳೂರು ನಗರದ ಉಪ ಪೊಲೀಸ್ ಆಯುಕ್ತರ ಕಛೇರಿಗಳಲ್ಲಿ ಸೃಜಿಸಲಾಗಿರುತ್ತದೆ.




## ವಾಹನ ಶಾಖೆ

ಕರ್ನಾಟಕ ರಾಜ್ಯದ ಪೊಲೀಸ್ ಇಲಾಖೆಯ ವಿವಿಧ ಘಟಕ/ ಜಿಲ್ಲೆಗಳಲ್ಲಿ 1,140 ಹಳೆಯ ವಾಹನಗಳನ್ನು ನಿರುಪಯುಕ್ತಗೊಳಿಸಲಾಗಿರುತ್ತದೆ ಹಾಗೂ 800 ವಾಹನಗಳನ್ನು (ದ್ವಿಚಕ್ರ, ನಾಲ್ಕು ಚಕ್ರ, ಆರು ಚಕ್ರ ಸೇರಿದಂತೆ) ಖರೀದಿಸಿ ಹಂಚಿಕೆ ಮಾಡಲಾಗಿದೆ.

## ಆಯವ್ಯಯ

ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 476 ಬಿಆರ್‌ಎಸ್ 2019, ದಿನಾಂಕ: 26/03/2020 ರಲ್ಲಿ ಕೋವಿಡ್ –19 ವೈರಾಣು ಹರಡುವಿಕೆಯನ್ನು ತಡೆಯುವ ವೆಚ್ಚ ಭರಿಸಲು ರೂ. 30 ಕೋಟಿಗಳನ್ನು ಪುನರ್ ವಿನಿಯೋಗದ ಮೂಲಕ ಸರ್ಕಾರದಿಂದ ಮಂಜೂರಾತಿ ಪಡೆಯಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 193 ಟಿಎನ್‌ಆರ್ 2020, ದಿನಾಂಕ: 16/04/2020 ಮತ್ತು 18/06/2020 ರಲ್ಲಿ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯನಿರತ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕೋವಿಡ್–19 ವೈರಾಣು ಹರಡುವಿಕೆಯನ್ನು ತಡೆಗಟ್ಟಲು ಅಗತ್ಯ ರಕ್ಷಣಾ ಸಾಮಗ್ರಿಗಳಾದ Mask, Sanitizer, Hand gloves and PPE Kit ಗಳನ್ನು ಎಸ್‌ಡಿಆರ್‌ಎಫ್ ಮಾರ್ಗಸೂಚಿಗಳನ್ವಯ ಖರೀದಿಸಲು ಮತ್ತು ಕ್ವಾರೆಂಟೈನ್‌ಗೆ ಒಳಪಡಿಸಲು ರೂ. 10 ಕೋಟಿಗಳನ್ನು ವಿವಿಧ ಘಟಕಗಳಿಗೆ ಅನುದಾನ ಬಿಡುಗಡೆಗೊಳಿಸಲಾಗಿದೆ.



## ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ

ಕೆಎಸ್‌ಆರ್‌ಪಿ–1999ರ ಅಧ್ಯಾಯ – IX ರನ್ವಯ ಸ್ಪೆ.ಆರ್.ಎಸ್.ಐ ಹುದ್ದೆಯಿಂದ ಸ್ಪೆ.ಆರ್.ಪಿ.ಐ ಹುದ್ದೆಗೆ ಮುಂಬಡ್ತಿ ಹೊಂದಿದ ಅಧಿಕಾರಿಗಳು ಕಡ್ಡಾಯವಾಗಿ 04 ವಾರಗಳ ಪುನರ್‌ಮನನ ತರಬೇತಿಯನ್ನು ಪಡೆಯಬೇಕಾಗಿರುತ್ತದೆ.

ಕೆಎಸ್‌ಆರ್‌ಪಿ/ಐಆರ್‌ಬಿ/ತರಬೇತಿ ಶಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳಲ್ಲಿ ಮೇಲಾಧಿಕಾರಿಗಳು ಕನಿಷ್ಠ ಶ್ರೇಣಿಯನ್ನು ನೀಡುತ್ತಿದ್ದು, ಇದರಿಂದ ರಾಷ್ಟ್ರಪತಿ /ಇತರೆ ಪದಕಗಳಿಗೆ ಶಿಫಾರಸ್ಸು ಮಾಡಲು ಕಷ್ಟಕರವಾಗುತ್ತಿದ್ದುದರಿಂದ, ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಬರೆಯುವ ಅಧಿಕಾರಿಗಳು ಕಡ್ಡಾಯವಾಗಿ ಕೆಲವು ಮಾನದಂಡಗಳನ್ನು ಪಾಲಿಸುವಂತೆ ದಿನಾಂಕ: 21/05/2020 ರಂದು ಸುತ್ತೋಲೆ ಹೊರಡಿಸಲಾಗಿದೆ.

### ಇಲಾಖಾ ಶಿಸ್ತು ಕ್ರಮಕ್ಕೆ ಸಂಬಂಧಿಸಿದಂತೆ ಸುತ್ತೋಲೆಗಳು

ಪೊಲೀಸ್ ಪ್ರಧಾನ ಕಛೇರಿಯ ಸುತ್ತೋಲೆ ಸಂಖ್ಯೆ: ಸಿಬಿ(8) /ಸುತ್ತೋಲೆ/02/2010–11, ದಿ:01.04.2020 ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಸಮಾನಾಂತರ ಹುದ್ದೆಗಳ ಅಧಿಕಾರಿಗಳ ವಿರುದ್ಧ ನಿಯಮ–6 ಹಾಗೂ ನಿಯಮ 6&8 (ಘೋರ ಶಿಕ್ಷೆಯಡಿ) ಆದೇಶಿಸಲಾದ ಇಲಾಖಾ ವಿಚಾರಣೆಗಳಲ್ಲಿ ಚಾಲ್ತಿಯಲ್ಲಿರುವ ಇಲಾಖಾ ವಿಚಾರಣೆಗಳು / ಕಾರಣ ಕೇಳುವ ಸೂಚನಾ ಪತ್ರ ಹೊರಡಿಸಿರುವ ಹಂತದಲ್ಲಿರುವ ಇಲಾಖಾ ವಿಚಾರಣೆಗಳ ಪ್ರಕರಣಗಳು/ ಮುಂದೆ ಆದೇಶಿಸಲ್ಪಡುವ ಇಲಾಖಾ ವಿಚಾರಣೆಗಳಲ್ಲಿ ಇಲಾಖಾ ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆ ಪೂರ್ಣಗೊಳಿಸಿ ವಿವಿಧ ಶಿಸ್ತು ಪ್ರಾಧಿಕಾರಿಗಳಿಗೆ ಸಲ್ಲಿಸಲಾದ ಅಂತಿಮ ವರದಿ ಮತ್ತು ದಾಖಲಾತಿಗಳನ್ನು ಪೊಲೀಸ್ ಪ್ರಧಾನ ಕಛೇರಿಗೆ ಅಂತಿಮ ಆದೇಶ ಹೊರಡಿಸುವುದರ ಸಲುವಾಗಿ ಸಲ್ಲಿಸುವಂತೆ ಘಟಕಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.

ಪೊಲೀಸ್ ಪ್ರಧಾನ ಕಛೇರಿಯ ಸುತ್ತೋಲೆ ಸಂಖ್ಯೆ: ಸಿಬಿ(8)/ಸುತ್ತೋಲೆ/02/2010–11, ದಿ: 18.04.2020 ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಸಮಾನಾಂತರ ಹುದ್ದೆಗಳ ಅಧಿಕಾರಿಗಳನ್ನು ಅಮಾನತ್ತುಗೊಳಿಸಿದ ಪ್ರಕರಣಗಳಲ್ಲಿ ಅಮಾನತ್ತುಗೊಳಿಸಿದ ಆದೇಶವನ್ನು ಇನ್ನು ಮುಂದೆ ಪ್ರಧಾನ ಕಛೇರಿಯಿಂದಲೇ ಸ್ಥಿರೀಕರಿಸಲಾಗುವುದು. ಅಮಾನತ್ತುಗೊಂಡ ಈ ಅಧಿಕಾರಿಗಳನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸುವ ಬಗ್ಗೆ ಪ್ರಧಾನ ಕಛೇರಿಯಲ್ಲಿ ತೀರ್ಮಾನಿಸಲಾಗುವುದೆಂದು ಘಟಕಾಧಿಕಾರಿಗಳಿಗೆ ಸೂಚಿಸಲಾಗಿದೆ.

ಮಾನ್ಯ ನ್ಯಾಯಾಲಯದಲ್ಲಿ ಖುಲಾಸೆಗೊಂಡ ಪ್ರಕರಣಗಳನ್ನು ವಿಶ್ಲೇಷಿಸಿ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯಲೋಪವೆಸಗಿರುವ ಸಂಬಂಧ ಶಿಸ್ತು ಕ್ರಮ ಜರುಗಿಸುವ ಪೂರ್ವದಲ್ಲಿ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಿಬಿ–5/109/2017–18, ದಿ: 09.02.2019 ರಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ.

## ರಾಜ್ಯ ಸಿಬ್ಬಂದಿ ಶಾಖೆ

- ರಾಜ್ಯ ಸಿಬ್ಬಂದಿ ಶಾಖೆಯು ಪೊಲೀಸ್ ಇಲಾಖೆಯ ಗ್ರೂಪ್–ಸಿ ಮತ್ತು ಗ್ರೂಪ್–ಡಿ ವೃಂದದ ಸೇವಾ ವಿವರಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಪೈಕಿ ದಿನಾಂಕ: 01.01.2019 ರಿಂದ 30.06.2020 ರವರೆಗೆ, ಒಟ್ಟು 760 ಪೊಲೀಸ್ ಸಿಬ್ಬಂದಿಯವರನ್ನು ಹಾಗೂ ಒಟ್ಟು 149 ಲಿಪಿಕ ಸಿಬ್ಬಂದಿಯವರನ್ನು ಕೋರಿಕೆಯ ಮೇರೆಗೆ ವರ್ಗಾವಣೆ ಮಾಡಲಾಗಿರುತ್ತದೆ. ಈ ಅವಧಿಯಲ್ಲಿ ಒಟ್ಟು 143 ಸಿಬ್ಬಂದಿಯವರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ನೀಡಲಾಗಿದ್ದು, 176 ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಸಲ್ಲಿಸಿದ ಅರ್ಜಿಗಳನ್ನು ಆಯಾ ವಲಯಗಳಲ್ಲಿ ನೇಮಕಾತಿ ಮಾಡುವಂತೆ ಪ್ರಾದೇಶಿಕ ಆಯುಕ್ತರುಗಳಿಗೆ ಕಳುಹಿಸಲಾಗಿದೆ. 239 ಪೊಲೀಸ್ ಸಿಬ್ಬಂದಿಯವರನ್ನು ರಾಷ್ಟ್ರೀಯ ಪೊಲೀಸ್ ಸಂಸ್ಥೆಗಳೂ ಸೇರಿ ವಿವಿಧ ಪೊಲೀಸ್ ಘಟಕಗಳಿಗೆ ನಿಯೋಜನೆ ಮಾಡಲಾಗಿದೆ. ದಿನಾಂಕ:01.01.2020 ರಂತೆ ಪಿ.ಎಸ್.ಐ., ಆರ್.ಎಸ್.ಐ., ಶಾಖಾಧೀಕ್ಷಕರು, ಪ್ರ.ದ.ಸ., ಹಿರಿಯ ಶೀಘ್ರಲಿಪಿಗಾರರು ಮತ್ತು ಶೀಘ್ರಲಿಪಿಗಾರರ ಹುದ್ದೆಗಳ ಜ್ಯೇಷ್ಠತಾ ಪಟ್ಟಿಗಳನ್ನು ಪ್ರಕಟಿಸಲಾಗಿದೆ. ಸ್ಥಾಯಿ ಆದೇಶ ಸಂಖ್ಯೆ: 704 (ನಿಯೋಜನಾ ಘಟಕಗಳ ಸೇರ್ಪಡೆ) ಮತ್ತು 1008 ಗಳಿಗೂ ಸಹ ತಿದ್ದುಪಡಿ ಮಾಡಲಾಗಿದೆ.
- ಸರ್ಕಾರದ ಆದೇಶ ಸಂಖ್ಯೆ: ಒಇ 62 ಪೊಸಿಲಿ 2010, ದಿನಾಂಕ: 09/08/2011 ರಲ್ಲಿ ಪೊಲೀಸ್ ಇಲಾಖೆಯಲ್ಲಿ ಮಂಜೂರಾಗಿರುವ ಒಟ್ಟು ಶೀಘ್ರಲಿಪಿಗಾರರ ಹುದ್ದೆಗಳಲ್ಲಿ 10 ಶೀಘ್ರಲಿಪಿಗಾರರ ಹುದ್ದೆಗಳನ್ನು ವೇತನ ಶ್ರೇಣಿ ರೂ.37,900–70,850/– ರಲ್ಲಿ "ಹಿರಿಯ ಶೀಘ್ರಲಿಪಿಗಾರರ" ಹುದ್ದೆಗಳೆಂದು ಮೇಲ್ದರ್ಜೆಗೇರಿಸಲಾಗಿದ್ದು, ಪೊಲೀಸ್ ಪ್ರಧಾನ ಕಛೇರಿಯ ಆದೇಶ ಸಂಖ್ಯೆ: ಸಿಬ್ಬಂದಿ–2/56/2011–12, ದಿನಾಂಕ: 20/07/2020 ರಲ್ಲಿ 10 ಹಿರಿಯ ಶೀಘ್ರಲಿಪಿಗಾರರ ಹುದ್ದೆಗಳನ್ನು ಹಿರಿಯ ಅಧಿಕಾರಿಗಳ ಕಛೇರಿಗಳಿಗೆ ಹಂಚಿಕೆ ಮಾಡಿ ಆದೇಶ ಹೊರಡಿಸಲಾಗಿದೆ.
- ಸ್ಪೆ.ಆರ್‌ಪಿಐ (ಬ್ಯಾಂಡ್ ಮಾಸ್ಟರ್)–01, ಸ್ಪೆ.ಆರ್‌ಎಸ್‌ಐ (ಬ್ಯಾಂಡ್ ಮಾಸ್ಟರ್)–14, ಸ್ಪೆ.ಎಆರ್‌ಎಸ್‌ಐ (ಬ್ಯಾಂಡ್ಸ್‌ಮನ್)– 56 ಮತ್ತು ಸ್ಪೆ.ಆರ್‌ಪಿಸಿ (ಬ್ಯಾಂಡ್ಸ್‌ಮನ್) – 252 ಹುದ್ದೆಗಳನ್ನು ಹೊಸದಾಗಿ ಬ್ಯಾಂಡ್ ಮಾಸ್ಟರ್ / ಬ್ಯಾಂಡ್ಸ್ ಮನ್ ಎಂದು ಮರುಪದನಾಮೀಕರಿಸಲಾಗಿದೆ.
- ಸ್ಪೆ.ಆರ್‌ಎಸ್‌ಐ ಹುದ್ದೆಯ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಮೌಖಿಕ ಸಂದರ್ಶನವನ್ನು ಕೈಬಿಡಲಾಗಿದೆ ಹಾಗೂ ಅಧಿಸೂಚಿತ ಹುದ್ದೆಗಳ ಅನುಗುಣವಾಗಿ ಅರ್ಹ ಅಭ್ಯರ್ಥಿಗಳು ಲಭ್ಯವಾಗುವವರೆಗೂ ತಾತ್ಕಾಲಿಕ ಆಯ್ಕೆ ಪಟ್ಟಿಗಳನ್ನು ಪ್ರಕಟಿಸಬಹುದಾಗಿದೆ.
- ಸ್ಪೆ.ಆರ್‌ಪಿಸಿ ಹುದ್ದೆಯ ನೇಮಕಾತಿ ಪ್ರಕ್ರಿಯೆಯಲ್ಲಿ ಮೊದಲು ದೈಹಿಕ ಸಹಿಷ್ಣುತೆ ಮತ್ತು ಸಾಮರ್ಥ್ಯ ಪರೀಕ್ಷೆ ನಂತರ ಲಿಖಿತ ಪರೀಕ್ಷೆ ಕ್ರಮವನ್ನು ಬದಲಿಸಿ ಮೊದಲು ಲಿಖಿತ ಪರೀಕ್ಷೆ ನಂತರ ದೈಹಿಕ ಸಹಿಷ್ಣುತೆ ಮತ್ತು ಸಾಮರ್ಥ್ಯಪರೀಕ್ಷೆ ಎಂದು ಬದಲಿಸಲಾಗಿದೆ.
- ಸ್ಪೆ.ಆರ್‌ಪಿಸಿ (ಬ್ಯಾಂಡ್ಸಮನ್) ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ನಿಯಮಗಳನ್ನು ಸೇರಿಸಲಾಗಿದೆ.
- ಅನುಯಾಯಿ ಹುದ್ದೆಗಳ ನೇರ ನೇಮಕಾತಿಯ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲು ಹಾಗೂ ಅಂಕಗಳನ್ನು ನೀಡುವ ಬಗ್ಗೆ ವಿಸ್ತಾರವಾಗಿ ನಿಯಮಗಳನ್ನು ಸೇರಿಸಲಾಗಿದೆ.

## ಕಾನೂನು ಮತ್ತು ಸುವ್ಯವಸ್ಥೆ

**ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದಂತೆ ಈ ಕೆಳಕಂಡ ಸುತ್ತೋಲೆಗಳನ್ನು ಹೊರಡಿಸಲಾಗಿದೆ.**

- ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ. 01/2020 ದಿನಾಂಕ 23.2.2020, ರಿಟ್ ಅರ್ಜಿ ಸಂಖ್ಯೆ 6435/2020 ಜೊತೆಗೆ 6671/2020 ಕ್ರಿಮಿನಲ್ ಅಪೀಲು ಸಂ. 1277/2014: 7 ವರ್ಷ ಮತ್ತು ಅಥವಾ ಅದಕ್ಕಿಂತ ಹೆಚ್ಚಿನ ಶಿಕ್ಷೆ ಇರುವ ಪ್ರಕರಣಗಳಲ್ಲಿ ಅಪರಾಧಿಗಳಿಗೆ ದಸಗಿರಿ ಮಾಡುವ ಸಂದರ್ಭಗಳಲ್ಲಿ ಅನುಸರಿಸಬೇಕಾದ ನಿಯಮಗಳ ಬಗ್ಗೆ ಸುತ್ತೋಲೆ.
- ಬೀಡಾಡಿ ದನಗಳು/ನಾಯಿಗಳು/ಮುದ್ದಿನ ಪ್ರಾಣಿಗಳ ಸಂರಕ್ಷಣೆ ಬಗ್ಗೆ: ಪ್ರಾಣಿ ಹಿಂಸೆ ತಡೆ ಕಾಯ್ದೆ 1960ರ ಕಲಂ 11(1) ಹಾಗೂ ಐಪಿಸಿ 428 ಮತ್ತು 429 ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯದ ಆದೇಶದನುಸಾರ ಯಾವುದೇ ಪ್ರಾಣಿ, ಪಕ್ಷಿ ಮತ್ತು ಜಾನುವಾರುಗಳನ್ನು ಆಹಾರ, ನೀರು, ಆಶ್ರಯ, ಆರೋಗ್ಯ ರಕ್ಷಣೆ ನೀಡದೆ ಕಡೆಗಣಿಸಿ ಪ್ರಾಣಿ, ಪಕ್ಷಿ, ಜಾನುವಾರುಗಳು ಮೃತಪಡದಂತೆ ನೋಡಿಕೊಳ್ಳುವುದು ಮಾಲೀಕರ ಕರ್ತವ್ಯ ಎಂಬ ಸುತ್ತೋಲೆ ಹೊರಡಿಸಲಾಗಿದೆ.
- ಬೀದಿಯಲ್ಲಿರುವ ಮತ್ತು ಮನೆಯಿರದೇ ನಿರ್ಗತಿಕರಾಗಿರುವ ಮಕ್ಕಳ ಸಂರಕ್ಷಣೆಗೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗವು ತಿಳಿಸಿರುವಂತೆ ಕ್ರಮ ಕೈಗೊಳ್ಳುವ ಕುರಿತು ಸುತ್ತೋಲೆ ಹೊರಡಿಸಲಾಗಿದೆ.

## ಉಗ್ರಾಣ ಶಾಖೆ

ಸಮವಸ್ತ್ರ ಮತ್ತು ಕಿಟ್ ಸಾಮಗ್ರಿಗಳ ಮಾದರಿ, ನಿರ್ದಿಷ್ಟತೆಗಳನ್ನು ಪರಿಶೀಲಿಸುವ ಸಲುವಾಗಿ ಮಾನ್ಯ ಡಿಜಿ ಮತ್ತು ಐಜಿಪಿ ರವರು ಈ ಕೆಳಕಂಡ ಕಿಟ್ ಸಮಿತಿಯನ್ನು ರಚಿಸಿ ಆದೇಶಿಸಿರುತ್ತಾರೆ.

| |
|---|
| 1. ಎಡಿಜಿಪಿ, ಕೆಎಸ್‌ಆರ್‌ಪಿ –ಅಧ್ಯಕ್ಷರು |
| 2. ಪೊಲೀಸ್ ಮಹಾನಿರೀಕ್ಷಕರು, ಕೇಂದ್ರಸ್ಥಾನ–1, ಸದಸ್ಯ ಕಾರ್ಯದರ್ಶಿಗಳು |
| 3. ಪೊಲೀಸ್ ಅಧೀಕ್ಷಕರು, ಬೆಂಗಳೂರು ಜಿಲ್ಲೆ – ಸದಸ್ಯರು |
| 4. ಡಿಸಿಪಿ, ಉತ್ತರ ವಿಭಾಗ, ಬೆಂಗಳೂರು ನಗರ – ಸದಸ್ಯರು |
| 5. ಡಿಸಿಪಿ, ಆಗ್ನೇಯ ವಿಭಾಗ, ಬೆಂಗಳೂರು ನಗರ – ಸದಸ್ಯರು |
| 6. ಡಿಸಿಪಿ, ಸಿಎಆರ್, ಕೇಂದ್ರಸ್ಥಾನ – ಸದಸ್ಯರು |
| 7. ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕೇಂದ್ರಸ್ಥಾನ – ಸದಸ್ಯರು |

**ಸಮವಸ್ತ್ರ:** ಹೊಸ ಮಾದರಿಯ ಸಮವಸ್ತ್ರವನ್ನು ಖಾಕಿ ಪಿವಿಕ್ಲಾತ್, ವೈಟ್ ಪಿವಿ ಕ್ಲಾತ್‌ಗಳಲ್ಲಿ ಮೂರು ಮಾದರಿಯ (**Polyester**–67% + **Viscose** –31% + **Spandex**– 2%) ನೂಲನ್ನು ಅಳವಡಿಸಿ, ಬಣ್ಣ ಮಾಸದಂತೆ **Fibre Dye** ಮಾಡಿದ್ದು, ವೈಜ್ಞಾನಿಕ ತಂತ್ರಗಳಂತೆ ಬಟ್ಟೆ ಬೇಗ ಒಣಗಲು, ಯಾವುದೇ ಸೋಂಕು ತಾಗದಂತೆ ತಯಾರಿಸಲಾಗಿದೆ.

ಈ ಕೆಳಕಂಡ ಮಾದರಿಯ ಶೂಗಳ ನಿರ್ದಿಷ್ಟತೆಗಳನ್ನು ಬದಲಾವಣೆ ಮಾಡಿ ಪ್ರತಿ ವರ್ಷ ಒಂದು ಜೊತೆಯಂತೆ ಅಧಿಕಾರಿ / ಸಿಬ್ಬಂದಿಗಳಿಗೆ ವಿತರಿಸಲಾಗುತ್ತಿದೆ.

| ಕ್ರಮ.ಸಂ | ವಿವಿಧ ಬಗೆಯ ಶೂಗಳು |
|---|---|
| 1. | ಆ್ಯಂಕಲ್ ಶೂ ವಿತ್ ಪಿಯು ರಬ್ಬರ್ ಸೋಲ್ |
| 2. | ಬ್ರೌನ್ ಆಕ್ಸ್‌ಫರ್ಡ್ ಶೂ, |
| 3. | ಲೇಡಿಸ್ ಶೂ |
| 4. | ಜಂಗಲ್ ಬೂಟ್ |
| 5. | ಸ್ಪೋರ್ಟ್ಸ್ ಶೂ |

**ಹೊಸ ಮಾದರಿಯ** ಈ ಕೆಳಕಂಡ ಕೆಲವು ಕಿಟ್ ಸಾಮಗ್ರಿಗಳನ್ನು ಉನ್ನತೀಕರಿಸಿ, ಖರೀದಿಸಿ ವಿತರಿಸಲಾಗುತ್ತಿದೆ

| ವೃಂದವಾರು | ಕಿಟ್ ಸಾಮಗ್ರಿಗಳ ವಿವರಗಳು |
|---|---|
| ಹೊಸದಾಗಿ ನೇಮಕಾತಿ ಹೊಂದುವ ಪೊಲೀಸ್ ಕಾನ್ಸ್‌ಟೇಬಲ್ & ಪಿಎಸ್‌ಐ ರವರಗಳಿಗೆ (ಸೇವೆಯಲ್ಲಿ ಒಂದು ಬಾರಿ ಮಾತ್ರ) | One Suit Case, |
| ಕೆಎಸ್‌ಆರ್‌ಪಿ ಮತ್ತು ಕೆಎಸ್‌ಐಎಸ್‌ಎಫ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಕಾನ್ಸ್‌ಟೇಬಲ್ ವೃಂದದಿಂದ ಪಿಎಸ್‌ಐ ಹುದ್ದೆಯವರೆಗೆ ಪ್ರತಿ 10 ವರ್ಷಕ್ಕೊಮ್ಮೆ | One Trolley Bag |
| ಸಿವಿಲ್/ಸಿಎಆರ್/ಡಿಎಆರ್ ಮತ್ತು ಸಂಚಾರ ವಿಭಾಗಗಳ ಪಿಸಿ ಯಿಂದ ಪಿಎಸ್‌ಐ ವರೆಗಿನ ಅಧಿಕಾರಿಗಳಿಗೆ 07 ವರ್ಷಗಳಿಗೊಮ್ಮೆ | One Back pack |
| ಪಿಸಿ ಯಿಂದ ಪಿಎಸ್‌ಐ (ಎಲ್ಲಾ ಘಟಕಗಳಿಗೆ ) ರವರುಗಳಿಗೆ ಮೂರು ವರ್ಷಗಳಿಗೊಮ್ಮೆ | One Khaki Jersey, |
| ಪಿಸಿ ಯಿಂದ ಪಿಎಸ್‌ಐ (ಎಲ್ಲಾ ಘಟಕಗಳಿಗೆ ) ರವರುಗಳಿಗೆ ಐದು ವರ್ಷಗಳಿಗೊಮ್ಮೆ | One Rain Coat – Upper & Lower Garment - Parrot Green. |
| ಎಎಸ್‌ಐ/ಪಿಎಸ್‌ಐ (ಎಲ್ಲಾ ಘಟಕಗಳಿಗೆ) ರವರುಗಳಿಗೆ ಐದು ವರ್ಷಗಳಿಗೊಮ್ಮೆ | One Jacket -Brown |
| ಪಿಸಿ–ಹೆಚ್‌ಸಿ (ಎಲ್ಲಾ ಘಟಕಗಳಿಗೆ) ರವರುಗಳಿಗೆ 5 ವರ್ಷಗಳಿಗೊಮ್ಮೆ | One Jacket- Blue |
| ಪಿಸಿ–ಹೆಚ್‌ಸಿ (ಎಲ್ಲಾ ಘಟಕಗಳಿಗೆ) ರವರುಗಳಿಗೆ 1 ವರ್ಷಕ್ಕೊಮ್ಮೆ | Two pairs of Khaki Socks |
| ಸಶಸ್ತ್ರ ಪಡೆಗಳ ಪಿಸಿ ಮತ್ತು ಹೆಚ್‌ಸಿ (ಪುರುಷ) ಗಳಿಗೆ ಪ್ರತಿ ವರ್ಷಕ್ಕೊಮ್ಮೆ | Two pairs of Sky Blue T Shirt, Shorts |
| ಸಶಸ್ತ್ರ ಪಡೆಗಳ ಪಿಸಿ ಮತ್ತು ಹೆಚ್‌ಸಿ (ಮಹಿಳೆ) ಗಳಿಗೆ ಪ್ರತಿ ವರ್ಷಕ್ಕೊಮ್ಮೆ | Two pairs of Sky Blue T Shirt, Track Pants, |

# ರಹಸ್ಯ ಶಾಖೆ

## ಮುಂಬಡ್ತಿ ಮತ್ತು ವರ್ಗಾವಣೆಗೆ ಸಂಬಂಧಿಸಿದಂತೆ

- ಸರ್ಕಾರದ ಆದೇಶ ಸಂಖ್ಯೆ: ಒಇ 35 ಪಿಇಐ 2020, ಬೆಂಗಳೂರು, ದಿ: 15.05.2020 ರಲ್ಲಿ ಪೊಲೀಸ್ ಉಪಾಧೀಕ್ಷಕರಾಗಿ (ಸಿವಿಲ್) ಮತ್ತು ಪೊಲೀಸ್ ನಿರೀಕ್ಷಕರಾಗಿ (ಸಿವಿಲ್) ಅಧಿಕಾರಿಗಳು ಮುಂಬಡ್ತಿ ಹೊಂದಿದ ತರುವಾಯ ಕಡ್ಡಾಯವಾಗಿ ಕನಿಷ್ಠ 02 ವರ್ಷಗಳ ಸೇವೆಯನ್ನು ಕಾರ್ಯಕಾರ್ಯೇತರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ಹಾಗೂ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಕನಿಷ್ಠ 05 ವರ್ಷಗಳ ಅವಧಿಗೆ ಮಾತ್ರ ಕಾರ್ಯಕಾರಿ ಹುದ್ದೆಯಲ್ಲಿ ಸೇವೆ ಸಲ್ಲಿಸಿ ತದನಂತರ ಪೊಲೀಸ್ ಕಮೀಷನರೇಟ್ ಹೊರತುಪಡಿಸಿ ಇತರೆ ಘಟಕಗಳಲ್ಲಿ 05 ವರ್ಷಗಳ ಕಾಲ *Cooling off period* ಅನ್ನು ಪೂರ್ಣಗೊಳಿಸಿ ನಂತರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಪುನಃ ಕರ್ತವ್ಯ ನಿರ್ವಹಿಸಲು ಅರ್ಹರಿರುತ್ತಾರೆ ಎಂದು ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.
- ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 38 ಪಿಓಪಿ 2020, ದಿ: 23.03.2020 ರಲ್ಲಿ ಡಿಟೆಕ್ಟಿವ್ ವಿಭಾಗದ ಕಾರ್ಯದಕ್ಷತೆಯನ್ನು ಹೆಚ್ಚಿಸುವ ಸಲುವಾಗಿ ಆಡಳಿತಾತ್ಮಕ ಹಿತದೃಷ್ಠಿಯಿಂದ ಒಂದು ವರ್ಷದ ಅವಧಿಗೆ ಹಾಗೂ ಮುಂದಿನ ಆದೇಶದವರೆಗೆ ಸಿಐಡಿ ಘಟಕದಲ್ಲಿ ಖಾಲಿ ಇರುವ ಡಿಟೆಕ್ಟಿವ್ ಇನ್ಸ್‌ಪೆಕ್ಟರ್ ಹುದ್ದೆಗಳ ಎದುರಾಗಿ ತಾತ್ಕಾಲಿಕವಾಗಿ ಪಿಐ (ಸಿವಿಲ್) ವೃಂದದ ಅಧಿಕಾರಿಗಳನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಿ ಕಾರ್ಯ ನಿರ್ವಹಿಸಲು ಸರ್ಕಾರವು ಅನುಮತಿ ನೀಡಿ ಆದೇಶಿಸಿರುತ್ತದೆ.

  ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 15 ಪಿಪಿಎ 2020–ಪಿಎಸ್–ಬಿ, ದಿನಾಂಕ: 29.07.2020 ರಲ್ಲಿ ಡಿವೈಎಸ್‌ಪಿ(ಸಿವಿಲ್) ಹುದ್ದೆಯಿಂದ ಎಸ್‌ಪಿ(ನಾನ್ ಐಪಿಎಸ್) ಹುದ್ದೆಗೆ ಮುಂಬಡ್ತಿಗಾಗಿ ನಿಗದಿಪಡಿಸಿರುವ ಕನಿಷ್ಠ ಸೇವಾ ಅವಧಿಯನ್ನು 05 ವರ್ಷದಿಂದ 04 ವರ್ಷಕ್ಕೆ ನಿಗದಿಪಡಿಸಿ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಮಾರ್ಪಡಿಸಲಾಗಿರುತ್ತದೆ.
- ಸಹಾಯಕ ಕಮಾಂಡೆಂಟ್ ವೃಂದದ ಎಲ್ಲಾ ಹುದ್ದೆಗಳನ್ನು (ಶೇ 100% ರಷ್ಟು) ಮುಂಬಡ್ತಿಯಿಂದ ತುಂಬಲು ಆದೇಶಿಸಲಾಗಿರುತ್ತದೆ.

**ದಿನಾಂಕ 01.01.2020 ರಿಂದ ದಿನಾಂಕ: 10/08/20 ರವರೆಗೆ ಗ್ರೂಪ್–ಎ ಮತ್ತು ಗ್ರೂಪ್ ಬಿ ವೃಂದದ ವಿವಿಧ ದರ್ಜೆಯ ಅಧಿಕಾರಿಗಳ ಮುಂಬಡ್ತಿ ನೀಡಲಾದ ವಿವರ.**

| | ಗ್ರೂಪ್–ಎ | |
|---|---|---|
| 1. | ಎಸ್.ಪಿ.(ನಿಸ್ತಂತು) | 03 |
| 2. | ಎಸ್.ಪಿ (ಸಶಸ್ತ್ರ) | 08 |
| 3. | ಎಸ್.ಪಿ (ನಾನ್ ಐಪಿಎಸ್) | 20 |
| 4. | ಡೆಪ್ಯೂಟಿ ಕಮಾಂಡೆಂಟ್ | 10 |
| 5. | ಡಿವೈಎಸ್‌ಪಿ (ಸಿವಿಲ್) | 11 |
| 6. | ಸಹಾಯಕ ಕಮಾಂಡೆಂಟ್ (ಕೆಎಸ್‌ಆರ್‌ಪಿ) | 04 |
| 7. | ಡಿವೈಎಸ್‌ಪಿ (ಎಫ್‌ಪಿಬಿ) | 03 |
| 8. | ಡಿವೈಎಸ್‌ಪಿ (ನಿಸ್ತಂತು) | 05 |
| 9. | ಡಿವೈಎಸ್‌ಪಿ (ಸಶಸ್ತ್ರ) | 01 |
| 10. | ಸಹಾಯಕ ನಿರ್ದೇಶಕರು (ಎಫ್‌ಎಸ್‌ಎಲ್) | 13 |
| 11. | ಆಡಳಿತಾಧಿಕಾರಿ | 03 |
| | ಗ್ರೂಪ್–ಬಿ | 00 |
| 12. | ಪಿ.ಐ (ಸಿವಿಲ್) | 40 |
| 13. | ಪಿ.ಐ (ನಿಸ್ತಂತು) | 07 |
| 14. | ಸಹಾಯಕ ಆಡಳಿತಾಧಿಕಾರಿ | 14 |
| | ಒಟ್ಟು (ಗ್ರೂಪ್ ಎ & ಬಿ) | 142 |

2018 ನೇ ಸಾಲಿಗೆ ಒಟ್ಟು 04 ಪ್ರೊ. ಐಪಿಎಸ್ ಅಧಿಕಾರಿಗಳು ಹಾಗೂ 2019 ನೇ ಸಾಲಿಗೆ ಒಟ್ಟು 09 ಪ್ರೊ. ಐಪಿಎಸ್ ಅಧಿಕಾರಿಗಳು ಕರ್ನಾಟಕ ಕೇಡರ್‌ಗೆ ನಿಯೋಜನೆಗೊಂಡಿರುತ್ತಾರೆ.

19 ಪೊಲೀಸ್ ಅಧಿಕಾರಿ / ಸಿಬ್ಬಂದಿಗಳಿಗೆ 2020 ರ ಗಣರಾಜ್ಯೋತ್ಸವದಂದು ಪ್ರಧಾನ ಮಂತ್ರಿ ಪೊಲೀಸ್ ಪದಕವನ್ನು ಘೋಷಿಸಲಾಗಿರುತ್ತದೆ.

# ಸಮಾಲೋಚಕರು




ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಮಾನಸಿಕ ಅಘಾತ ಮತ್ತು ದೈನಂದಿನ ಒತ್ತಡಗಳಿಗೆ ಒಳಗಾಗಿ ಆತ್ಮಹತ್ಯೆಯಂತಹ ಯೋಚನೆಗೆ ಒಳಗಾಗದೆ ಇರಲು ಮತ್ತು ಅವರ ಆತ್ಮಸ್ಥೈರ್ಯ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರದ ಆದೇಶ ಸಂ. ಹೆಚ್.ಡಿ 230 ಪಿಒಪಿ 2016 ದಿ: 28.12.2016 ರಲ್ಲಿ 50 ಸಮಾಲೋಚಕರು, 9 ಹಿರಿಯ ಸಮಾಲೋಚಕರು ಮತ್ತು ಒಂದು ನಿರ್ದೇಶಕರ ಹುದ್ದೆಗಳನ್ನು ಮಂಜೂರಿಸಿದ್ದು, 30 ಜಿಲ್ಲೆ, 4 ನಗರಗಳು, 10 ಕೆ.ಎಸ್.ಆರ್.ಪಿ/ ಐ.ಆರ್.ಬಿ ಪಡೆಗಳು ಮತ್ತು 6 ಹುದ್ದೆಗಳನ್ನು ಬೆಂಗಳೂರು ನಗರದಲ್ಲಿ ಗುರುತಿಸಲಾಗಿರುತ್ತದೆ. ಪ್ರಸ್ತುತ 44 ಸಮಾಲೋಚಕರು ವಿವಿಧ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಮಾಲೋಚಕರ ಸೇವೆಯನ್ನು ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಬಳಸಿಕೊಳ್ಳಲು ಕೋರಲಾಗಿದೆ.

# ಕಟ್ಟಡ ಶಾಖೆಗೆ

- ಬೆಳಗಾವಿಯಲ್ಲಿ ನೂತನ ಪೊಲೀಸ್ ಆಯುಕ್ತರ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಸರ್ಕಾರವು ದಿ:21.12.2019 ರಂದು ರೂ.150.00 ಲಕ್ಷ ಮತ್ತು ದಿ: 10.03.2020 ರಂದು ರೂ.150.00 ಲಕ್ಷಗಳಿಗೆ ಮಂಜೂರಾತಿ ಆದೇಶ ನೀಡಿ, ಅನುದಾನ ಬಿಡುಗಡೆಯಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.
- ಸೆಂಟ್ರಲ್ ಕಮಾಂಡ್ ಸೆಂಟರ್ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಸರ್ಕಾರವು ದಿ:23.03.2020 ರಂದು ರೂ.500.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
- ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳನ್ನು ಒನ್ ಸ್ಟಾಪ್ ಸರ್ವೀಸ್ ಸೆಂಟರ್‌ಗಳನ್ನಾಗಿ ಮೇಲ್ದರ್ಜೆಗೇರಿಸಲು ರೂ.328.50 ಲಕ್ಷಗಳನ್ನು ದಿ: 26.03.2020 ರಂದು ಮಂಜೂರಿಸಿ, ಬಿಡುಗಡೆ ಮಾಡಿದೆ. ಕಾಮಗಾರಿ ಪ್ರಗತಿಯಲ್ಲಿದೆ.
- ನಿವೃತ್ತ ಪೊಲೀಸ್ ಅಧಿಕಾರಿ/ ಸಿಬ್ಬಂದಿ ರವರ ಆರೋಗ್ಯ ಯೋಜನೆಯಡಿಯಲ್ಲಿ ಜುಲೈ 2019 ರಿಂದ ಜೂನ್–2020 ರವರೆಗೆ ರೂ.2,47,11,287/–ಗಳನ್ನು ಅಧಿಕಾರಿ/ಸಿಬ್ಬಂದಿ ರವರುಗಳು ಚಿಕಿತ್ಸೆ ಪಡೆದ ಬಿಲ್ಲುಗಳ ಮೊತ್ತವನ್ನು ಸಂಬಂಧಪಟ್ಟ ಆಸ್ಪತ್ರೆಗಳಿಗೆ ಪಾವತಿಸಲಾಗಿದೆ.



# ಆರೋಗ್ಯ ಭಾಗ್ಯ ಯೋಜನೆ

- ಸರ್ಕಾರವು 2020ರ ವರ್ಷದಲ್ಲಿ ಒಟ್ಟು ರೂ. 9776.60 ಲಕ್ಷ ಅನುದಾನ ಬಿಡುಗಡೆ ಮಾಡಿದ್ದು, ಆರೋಗ್ಯ ಭಾಗ್ಯ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಇದುವರೆಗೆ ಒಟ್ಟು ರೂ.7066.75 ಲಕ್ಷ ಪಾವತಿಸಲಾಗಿದೆ.

2020ರ ವರ್ಷದಲ್ಲಿ ಈ ಕೆಳಕಂಡ ಹೊಸ ಆಸ್ಪತ್ರೆಗಳನ್ನು ಆರೋಗ್ಯ ಭಾಗ್ಯ ಯೋಜನೆಯಡಿಯಲ್ಲಿ ಚಿಕಿತ್ಸೆಗಾಗಿ ಗುರುತಿಸಲಾಗಿದೆ.

1. ವೀರಾಪುರ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಹಾವೇರಿ,
2. ಅಪೊಲೋ ಆಸ್ಪತ್ರೆ, ಜಯನಗರ, ಬೆಂಗಳೂರು.
3. ಜಯದೇವ ಆಸ್ಪತ್ರೆ, ಮೈಸೂರು
4. ಸಿದ್ಧಗಂಗಾ ಆಸ್ಪತ್ರೆ ಮತ್ತು ರಿಸರ್ಚ್ ಸೆಂಟರ್, ತುಮಕೂರು
5. ಸನ್ ಶೈನ್ ಪುರಂತರ ಆಸ್ಪತ್ರೆ, ದಾವಣಗೆರೆ
6. ವಾಸುದೇವ ಆಸ್ಪತ್ರೆ, ವಿಜಯಪುರ
7. ತಥಾಗತ್ ಆಸ್ಪತ್ರೆ, ಬೆಂಗಳೂರು.

ವಾರ್ತಾ ಪತ್ರಿಕೆ
ಆಗಸ್ಟ್ 2020 ★★ AUGUST, 2020 NEWSLETTER

## ಪೊಲೀಸ್ ನೇಮಕಾತಿ ವಿಭಾಗ



**ನೇಮಕಾತಿಯಲ್ಲಿ ಈ ಕೆಳಕಂಡ ವಿಧಾನಗಳನ್ನು ಅನುಸರಿಸಲಾಗುತ್ತಿದೆ.**

***Use of CCTV :*** *Every event will have written examination. The Evaluation and scanning of answer sheets etc is recorded either through video camera or CCTV.*

***Use of OMR /OCR answer Sheet:*** *OMR answer sheets are used for objectivity in the written examination. OMR will be in duplicate and carbon less, and second copy is given to candidates.*

***Use of bio metric device based IDs.*** *To avoid impersonation and duplication in ET/PET, biometric machines are used.*

***Facilitation of TRP in the Recruitment Rules.***

The Karnataka Recruitment process has got ISO-9001 Certification since 2004 and in 2016 it was adjudged as one of the "Best practices" by MHA in ***HON'BLE PRIME MINISTER'S SMART POLICING*** Project. In the year 2018 ***FICCI SMART POLICING*** award was given to Karnataka Police for the initiative

### "Transparent Recruitment Process"

ಪೊಲೀಸ್ ಇಲಾಖೆಯಲ್ಲಿ ವಿವಿಧ ಪೊಲೀಸ್ ಹುದ್ದೆಗಳಿಗೆ ನೇಮಕಾತಿ ನೀಡುವ ಸಮಯದಲ್ಲಿ ಎಸ್.ಎಸ್.ಎಲ್.ಸಿ, ಪಿಯುಸಿ ಮತ್ತು ಪದವಿ ವಿದ್ಯಾರ್ಹತೆಗಳ ತತ್ಸಮಾನ ವಿದ್ಯಾರ್ಹತೆ / ಕೋರ್ಸುಗಳನ್ನು ಪರಿಗಣಿಸುವ ಬಗ್ಗೆ ಸ್ಪಷ್ಟೀಕರಣ ನೀಡಿ ದಿನಾಂಕ: 09/07/2020 ರಂದು ಸುತ್ತೋಲೆ ಹೊರಡಿಸಲಾಗಿದೆ.

*As per Government approval following recruitments are taken up for the year 2020, and the process has been initiated*

| Sl.No | Rankwise Details | Num |
|---|---|---|
| 1 | PSI (Civil), (Non-H-K & H-K ), RSI(CAR/DAR) (Non-H-K & H-K ),wireless, KSISF, KSRP | 718 |
| 2 | Police Constable (Men & Women) (Non-H-K & H-K ), Armed Police Constables (CAR/DAR) (Non-H-K & H-K ) Spl.Reserve Police Constable (KSRP) | 6686 |
| 3 | Scientific Officer, Laboratory Assistant, EEG Technician, Laboratory Attender in Forensic Science Laboratory | 99 |
| 4 | Fire station officer , Fireman, Fireman Driver, Driver Mechanic in Fire & Emergency Services Department | 1567 |

2019 ಮತ್ತು 2020 ನೇ ಸಾಲಿನಲ್ಲಿ (20.03.2020 ರವರೆಗೆ) ಕರ್ನಾಟಕ ರಾಜ್ಯದ ವಿವಿಧ ಪೊಲೀಸ್ ತರಬೇತಿ ಶಾಲೆಗಳಲ್ಲಿ ಈ ಕೆಳಕಂಡ ವೃಂದದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ.

| ಕ್ರಮ.ಸಂ | ವೃಂದವಾರು ವಿವರ | ಸಂಖ್ಯೆ |
|---|---|---|
| 1. | ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್ | 797 |
| 2. | ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ | 777 |
| 3. | ಪೊಲೀಸ್ ಕಾನ್ಸ್‌ಟೇಬಲ್ | 5520 |
| 4. | ಪಿಎಸ್ಐ/ಆರ್‌ಎಸ್ಐ | 560 |
| 5. | ಅಬಕಾರಿ ಎಸ್ಐ | 20 |
| 6. | ಪಿಎಸ್ಐ (ಸಿವಿಲ್) | 351 |
| 7. | ಡಿವೈಎಸ್‌ಪಿ | 36 |

**ಈ ಕೆಳಕಂಡ ಸಂಖ್ಯೆಯ ಅಧಿಕಾರಿ / ಸಿಬ್ಬಂದಿಗಳು ನಿರ್ಗಮನ ಪಥಸಂಚಲನವನ್ನು ಮುಗಿಸಿರುತ್ತಾರೆ**

| ಕ್ರಮ.ಸಂ | ವರ್ಷಾವಾರು ವಿವರ | ಸಂಖ್ಯೆ |
|---|---|---|
| 1. | 2019 | 5037 |
| 2. | 2020 | 1243 |

ಪ್ರಸ್ತುತ 4,289 ಅಧಿಕಾರಿ/ ಸಿಬ್ಬಂದಿಗಳು ತರಬೇತಿಯನ್ನು ಪಡೆಯುತ್ತಿರುತ್ತಾರೆ.

## ಅಪರಾಧ ಶಾಖೆ

- **ಅನಧಿಕೃತ ಅಂಗಾಂಗ ಮಾರಾಟ/ಅನಧಿಕೃತ ಅಂಗಾಂಗ ಕಸಿ ಕಾನೂನು ಬಾಹಿರ ಪ್ರಕರಣಗಳು** ದಾಖಲಾಗುವ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಪೊಲೀಸ್ ಪ್ರಧಾನ ಕಛೇರಿಯಿಂದ ಸುತ್ತೋಲೆಯನ್ನು ದಿ:25-02-2020ರಂದು ಹೊರಡಿಸಿದೆ.
- ವನ್ಯಜೀವಿ ಸಂರಕ್ಷಣಾ ಅಧಿನಿಯಮ-1972 ರನ್ವಯ **ವನ್ಯಜೀವಿ ಪ್ರಕರಣಗಳನ್ನು ದಾಖಲಿಸುವ ಸಂದರ್ಭದಲ್ಲಿ** ಭಾರತ ಸರ್ಕಾರದ Wildlife Crime and Control Bureau, Ministry of Environment and Forests ಇಲಾಖೆಯ ಕೈಪಿಡಿಯಂತೆ, ಪ್ರಕರಣ ದಾಖಲಿಸುವ, ತನಿಖೆ ನಡೆಸುವ ಮತ್ತು ಅಭಿಯೋಜನೆ ಕ್ರಮಗಳ ಬಗ್ಗೆ ಪೊಲೀಸ್ ಪ್ರಧಾನ ಕಛೇರಿಯಿಂದ ಸುತ್ತೋಲೆಯನ್ನು ದಿ:10-03-2020 ರಂದು ಹೊರಡಿಸಿದೆ.
- ಘೋರ ಅಪರಾಧ / ಸಂಜ್ಞೇಯ ಅಪರಾಧ ಪ್ರಕರಣಗಳು ವರದಿಯಾದಾಗ, ಠಾಣಾಧಿಕಾರಿಗಳು **ಪ್ರಥಮ ವರ್ತಮಾನ ವರದಿ ದಾಖಲಿಸಲು** ನಿರಾಕರಿಸದೇ/ವಿಳಂಬ ಮಾಡದೆ ಕೂಡಲೇ ಕ್ರಮ ಕೈಗೊಳ್ಳಲು ಸೂಚಿಸಿ ಹಾಗೂ ತರಬೇತಿ ಕಾರ್ಯಾಗಾರ ನೀಡಲು ಮತ್ತು ಅಗತ್ಯ ಕ್ರಮ ಕೈಗೊಳ್ಳುವಂತೆ ಪೊಲೀಸ್ ಪ್ರಧಾನ ಕಛೇರಿಯಿಂದ ಸುತ್ತೋಲೆಯನ್ನು ದಿ:03-03-2020ರಂದು ಹೊರಡಿಸಿದೆ.
- ಠಾಣಾ, ವೃತ್ತ ಮಟ್ಟದಲ್ಲಿರುವ **ಕೋರ್ಟ್ ಮಾನಿಟರಿಂಗ್ ಸೆಲ್‌ಗಳು** ನ್ಯಾಯಾಲಯದಲ್ಲಿನ ಪ್ರಕರಣಗಳ ನಿರ್ವಹಣೆ ಹಾಗೂ ವಿಚಾರಣೆಯಲ್ಲಿರುವ ಪ್ರಕರಣಗಳ ಕುರಿತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ ಅನುಷ್ಠಾನಗೊಳಿಸಲು ಹಾಗೂ ನಿಗದಿತ ನಮೂನೆಗಳಲ್ಲಿ ನಿರ್ವಹಿಸುವಂತೆ ಸೂಚಿಸಿ, ಪೊಲೀಸ್ ಪ್ರಧಾನ ಕಛೇರಿಯಿಂದ ಸುತ್ತೋಲೆಯನ್ನು ದಿ:11-03-2020ರಂದು ಹೊರಡಿಸಿದೆ.
- ರಾಜ್ಯದ ಎಲ್ಲಾ ನ್ಯಾಯಾಲಯದಲ್ಲಿರುವ ಪ್ರಕರಣಗಳ ತ್ವರಿತ ವಿಚಾರಣೆಗಾಗಿ, ಕೇಂದ್ರ/ಜಿಲ್ಲಾ/ತಾಲ್ಲೂಕುಗಳ ಕಾರಾಗೃಹಗಳಲ್ಲಿ ಅಳವಡಿಸಲಾಗಿರುವ ವಿಡಿಯೋ ಕಾನ್‌ಫರೆನ್ಸಿಂಗ್ ವ್ಯವಸ್ಥೆಯನ್ನು ನ್ಯಾಯ ವಿಜ್ಞಾನ ಪ್ರಯೋಗಾಲಯ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಉಪಯೋಗಿಸಲು ಹಾಗೂ ಇದರಿಂದ ಸಮಯ ಉಳಿತಾಯ ಹಾಗೂ ಆರ್ಥಿಕ ವೆಚ್ಚ ನಿಯಂತ್ರಣ ಆಗುವ ಕುರಿತು ಸರ್ಕಾರವು ನೀಡಿರುವ ನಿರ್ದೇಶನದಂತೆ ಕ್ರಮ ಕೈಗೊಳ್ಳಲು ಪೊಲೀಸ್ ಪ್ರಧಾನ ಕಛೇರಿಯಿಂದ ಸುತ್ತೋಲೆಯನ್ನು ದಿ:24-03-2020ರಂದು ಹೊರಡಿಸಿದೆ.
- ಘನ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಠಾಣೆಯಲ್ಲಿನ ಪ್ರಕರಣಗಳಲ್ಲಿನ **ಕೇಸ್ ಡೈರಿಗಳನ್ನು ತನಿಖಾಧಿಕಾರಿಗಳು ಬರೆಯುವ ಸಂದರ್ಭದಲ್ಲಿ** ಅನುಸರಿಸಲು ನೀಡಿದ ಸೂಚನೆಗಳಂತೆ ಕಾರ್ಯ ನಿರ್ವಹಿಸುವಂತೆ ಪೊಲೀಸ್ ಪ್ರಧಾನ ಕಛೇರಿಯಿಂದ ಸುತ್ತೋಲೆಯನ್ನು ದಿ:27-03-2020ರಂದು ಹೊರಡಿಸಿದೆ.
- **ಠಾಣೆಯ ಡೈರಿ ನಿರ್ವಹಣೆಯಲ್ಲಿನ ನಿರ್ಲಕ್ಷ್ಯತೆ,** ಬಂಧನ ಸಮಯದಲ್ಲಿ ಮಾರ್ಗಸೂಚಿಗಳನ್ನು ಅನುಸರಿಸದೆ ಪ್ರಕರಣಗಳನ್ನು ಪೊಲೀಸ್ ಠಾಣೆಯ ಹೊರಗಡೆ ಬಗೆಹರಿಸಲು ಹಾಗೂ ದೂರು ಹಿಂಪಡೆಯಲು ಪ್ರೇರೇಪಿಸುವ ಅಂಶಗಳ ಬಗ್ಗೆ ಆಕ್ಷೇಪಿಸಿ, ಅಗತ್ಯ ಸೂಚನೆಗಳನ್ನು ಪಾಲಿಸುವಂತೆ ಪೊಲೀಸ್ ಪ್ರಧಾನ ಕಛೇರಿಯಿಂದ ಸುತ್ತೋಲೆಯನ್ನು ದಿ:16-05-2020ರಂದು ಹೊರಡಿಸಿದೆ.
- ಸಿಸಿಟಿವಿಗಳಲ್ಲಿ ಕೃತ್ಯಗಳ ಕುರಿತು ದಾಖಲಾದ ದೃಶ್ಯಗಳ ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಗಳಿಗೆ ತನಿಖಾಧಿಕಾರಿಗಳು ಕಳುಹಿಸುತ್ತಿದ್ದು, ಈ ಬಗ್ಗೆ ತನಿಖಾಧಿಕಾರಿಗಳು **ಸಿಸಿಟಿವಿ/ಡಿವಿಆರ್‌ಗಳಲ್ಲಿ ದಾಖಲಾಗಿರುವ ದೃಶ್ಯಾವಳಿಗಳ ಕುರಿತು ಅನುಸರಿಸಬೇಕಾದ ಕಾರ್ಯವಿಧಾನಗಳ** ಬಗ್ಗೆ ಪೊಲೀಸ್ ಪ್ರಧಾನ ಕಛೇರಿಯಿಂದ ಸುತ್ತೋಲೆಯನ್ನು ದಿ:03-07-2020ರಂದು ಹೊರಡಿಸಿದೆ.
- ಕ್ರಿಮಿನಲ್ ಪ್ರಕರಣಗಳ ತನಿಖೆಯ ಸಂದರ್ಭಗಳಲ್ಲಿ ತನಿಖಾಧಿಕಾರಿಗಳು ಎಲೆಕ್ಟ್ರಾನಿಕ್ ಸಾಕ್ಷ್ಯಗಳಾದ ಕಂಪ್ಯೂಟರ್, ಲ್ಯಾಪ್‌ಟಾಪ್, ಮೊಬೈಲ್, ಸಿಡಿಆರ್ ಹಾಗೂ ಇತರೆ ಸಾಧನಗಳನ್ನು ವಶಪಡಿಸಿಕೊಳ್ಳುವಾಗ ಪೊಲೀಸ್ ಠಾಣೆ, ಸೆನ್ ಪೊಲೀಸ್ ಠಾಣೆ, ಸಿಐಡಿಯಲ್ಲಿನ ಸೈಬರ್ ಕ್ರೈಂ ವಿಭಾಗ ಮತ್ತು ವಿಧಿ ವಿಜ್ಞಾನ ಪ್ರಯೋಗಾಲಯಗಳ ಅಧಿಕಾರಿಗಳ ಪಾತ್ರ ಮತ್ತು ನಿರ್ವಹಿಸಬೇಕಾದ ಜವಾಬ್ದಾರಿಗಳ ಕುರಿತು ಪೊಲೀಸ್ ಪ್ರಧಾನ ಕಛೇರಿಯಿಂದ ಸುತ್ತೋಲೆಯನ್ನು ದಿ:03-07-2020ರಂದು ಹೊರಡಿಸಿದೆ.
- ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ವಿಚಾರಣೆಯ ಸಮಯದಲ್ಲಿ ದೌರ್ಜನ್ಯಕ್ಕೆ ಒಳಗಾದವರ ಮತ್ತು ಅವರ ಕುಟುಂಬ ಸದಸ್ಯರೊಂದಿಗೆ ಸಂವಹನ ನಡೆಸಲು **liaison officer ನಾಮನಿರ್ದೇಶನ ಮಾಡುವ ಸಂಬಂಧ** ಕ್ರಮ ಕೈಗೊಳ್ಳುವಂತೆ ಪೊಲೀಸ್ ಪ್ರಧಾನ ಕಛೇರಿಯಿಂದ ದಿ:25-02-2020ರಂದು ಸ್ಥಾಯಿ ಆದೇಶವನ್ನು ಹೊರಡಿಸಲಾಗಿದೆ.

ವಾರ್ತಾ ಪತ್ರಿಕೆ
ಆಗಸ್ಟ್ 2020 ★★ AUGUST, 2020 NEWSLETTER

# 1980ರ ನರಗುಂದ ರೈತ ಚಳುವಳಿಯಲ್ಲಿ ಹುತಾತ್ಮರಾದ ಪೊಲೀಸರ ಸ್ಮರಣಾರ್ಥ ಸ್ಮಾರಕ ನಿರ್ಮಾಣ

ಗದಗ ಜಿಲ್ಲೆ: ಬೆಟರಮೆಂಟ್ ಲೆವಿ ಹಾಗೂ ರೈತರ ಸಾಲಮನ್ನಾ ಆಗ್ರಹಿಸಿ ಸುಮಾರು 5000 ಸಾವಿರಕ್ಕೂ ಹೆಚ್ಚು ವಿವಿಧ ರೈತ ಸಂಘಟನೆಗಳ ಮುಖಂಡರು ದಿ. ರಾಜಶೇಖರಪ್ಪ ಹೊಸಕೇರಿ ನೇತೃತ್ವದಲ್ಲಿ ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ಆಡಳಿತ ಕಛೇರಿಯ ಆವರಣದಲ್ಲಿ 1980ನೇ ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಉಪವಾಸ ಸತ್ಯಾಗ್ರಹ ನಡೆಸಿರುತ್ತಾರೆ. ಆದರೆ ಸದರಿ ರೈತರು ನಡೆಸಿದ ಉಪವಾಸ ಸತ್ಯಾಗ್ರಹಕ್ಕೆ ಸರ್ಕಾರ ಸ್ಪಂದಿಸಲಿಲ್ಲವೆಂದು ಆಕ್ರೋಶಗೊಂಡು ದಿನಾಂಕ 21 ಜುಲೈ 1980ರಂದು ತಹಶೀಲ್ದಾರ್ ಮತ್ತು ರೈತರ ನಡುವೆ ಮಾತಿಗೆ ಮಾತು ಬೆಳೆದು ರೈತರು ಕಲ್ಲು ತೂರಾಟ ನಡೆಸಿ ತಹಶೀಲ್ದಾರ್ ಕಛೇರಿ ಹಾಗೂ ಸರ್ಕಾರಿ ಕಛೇರಿಗಳಿಗೆ ನುಗ್ಗಿ ಕಾಗದ ಪತ್ರಗಳು ಹಾಗೂ ಸಾರ್ವಜನಿಕರ ಆಸ್ತಿ-ಪಾಸ್ತಿ ಹಾನಿಮಾಡಿ ಪೊಲೀಸರ ವಾಹನಗಳಿಗೆ ಬೆಂಕಿ ಹಚ್ಚಿರುತ್ತಾರೆ. ಪರಿಸ್ಥಿತಿ ಹತೋಟಿ ಮೀರುತ್ತಿರುವುದನ್ನು ಮನಗೊಂಡು ಸ್ಥಳದಲ್ಲಿದ್ದ ನರಗುಂದ ಠಾಣಾ ಅಧಿಕಾರಿ ಮತ್ತು ಸಿಬ್ಬಂದಿಗಳು ಕೂಡಲೇ ನಿಯಂತ್ರಣಕ್ಕೆ ತರಲೇಬೇಕಾದಂತಹ ಸಮಯದಲ್ಲಿ ಲಘುಲಾಠಿ ಪ್ರಹಾರ ಮತ್ತು ಅಶ್ರುವಾಯು ಹಾಗೂ ಗೋಲಿಬಾರ್ ಪ್ರಯೋಗಿಸಿರುತ್ತಾರೆ.

ಈ ಸಂದರ್ಭದಲ್ಲಿ ಅಕ್ರೋಶಗೊಂಡ ರೈತರು ಸ್ಥಳದಲ್ಲಿ ಕರ್ತವ್ಯದಲ್ಲಿದ್ದ ಪೋಲಿಸರ ಮೇಲೆ ಏಕಾಏಕಿ ಕಲ್ಲು ತೂರಾಟ ನಡೆಸಿದ್ದರಿಂದ ಕರ್ತವ್ಯದಲ್ಲಿ ನಿರತರಾಗಿದ್ದ 1) ಶ್ರೀ. ಸಿಕಂದರ .ಬಾ. ಪಾಟೀಲ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್, 2) ಶ್ರೀ. ನಾಗಪ್ಪ .ಸಿ ಅಕ್ಕಿ, ಸಹಾಯಕ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (ಸಶಸ್ತ್ರ) ಹಾಗೂ 3) ಶ್ರೀ. ಬಸಯ್ಯ .ಚ. ಹಿರೇಮಠ, ಪೊಲೀಸ್ ಕಾನ್ಸ್‌ಟೇಬಲ್ (ಸಶಸ್ತ್ರ) ರವರುಗಳು ತೀವ್ರ ಗಾಯಗಳಿಂದಾಗಿ ಮರಣಹೊಂದಿರುತ್ತಾರೆ.



ಸ್ಥಳದಲ್ಲಿ ಕರ್ತವ್ಯದಲ್ಲಿದ್ದ 67 ಜನ ಪೊಲೀಸರು ತೀವ್ರ ಗಾಯಗಳಾಗಿ ಚಿಕಿತ್ಸೆ ಪಡೆದು ಪ್ರಾಣಾಪಾಯದಿಂದ ಪಾರಾಗಿದ್ದರು.

ಈ ಗಲಭೆಯಲ್ಲಿ ಹುತಾತ್ಮರಾದ ಮೂವರ ಸ್ಮರಣಾರ್ಥವಾಗಿ ದಿನಾಂಕ 21-07-2020 ರಂದು ನರಗುಂದ ಠಾಣಾ ಆವರಣದಲ್ಲಿ " **ಪೊಲೀಸ್ ಹುತಾತ್ಮರ ಸ್ಮಾರಕ** " ವನ್ನು ನಿರ್ಮಿಸಲಾಗಿದೆ. ಈ ಹುತಾತ್ಮರ ಸ್ಮರಣಾರ್ಥವಾಗಿ ಪ್ರತಿ ವರ್ಷ ಜುಲೈ 21 ರಂದು ಗದಗ ಜಿಲ್ಲೆಯುಲ್ಲಿ ಪೊಲೀಸ್ ಹುತಾತ್ಮರ ದಿನವನ್ನಾಗಿ ಆಚರಣೆ ಮಾಡಲಾಗುವುದು.

## ಹುತಾತ್ಮ ಮೀಸೆ ತಿಮ್ಮಯ್ಯನವರ ಪುತ್ಥಳಿ ಅನಾವರಣ





ದಿವಂಗತ ಮೀಸೆ ತಿಮ್ಮಯ್ಯ, ಮುಖ್ಯಪೇದೆ 1465, ಕಬ್ಬನ್ ಪಾರ್ಕ್ ಸಂಚಾರ ಪೊಲೀಸ್ ಠಾಣೆ ರವರು ಬೆಂಗಳೂರಿನ ಅಂಚೆ ಕಛೇರಿ ವೃತ್ತದಲ್ಲಿ 1995 ರ ಆಗಸ್ಟ್‌ನಲ್ಲಿ ಕರ್ತವ್ಯನಿರ್ವಹಿಸುತ್ತಿದ್ದಾಗ, ವೇಗವಾಗಿ ಬಂದ ಲಾರಿಯೊಂದು ವಿದೇಶಿ ಮಹಿಳೆ ಮತ್ತು ಆಕೆಯ ಮಗಳಿಗೆ ಡಿಕ್ಕಿ ಹೊಡೆಯುವುದರಲ್ಲಿತ್ತು. ಅದನ್ನು ಕಂಡು ತಿಮ್ಮಯ್ಯನವರು ಕಾರ್ಯಪ್ರವೃತ್ತರಾಗಿ, ಅವರನ್ನು ರಕ್ಷಿಸಲು ಮುಂದಾಗಿ, ಮಹಿಳೆ ಮತ್ತು ಆಕೆಯ ಮಗಳನ್ನು ರಕ್ಷಿಸಿ, ತಮ್ಮ ಪ್ರಾಣ ತ್ಯಾಗ ಮಾಡಿರುತ್ತಾರೆ.ಇವರ ಪುತ್ಥಳಿಯನ್ನು ಸನ್ಮಾನ್ಯ ಗೃಹ ಸಚಿವರು ಮುಖ್ಯ ಅಂಚೆ ಕಛೇರಿ ವೃತ್ತದ ಬಳಿ ಅನಾವರಣಗೊಳಿಸಿರುತ್ತಾರೆ.

## ರಾಜ್ಯದ ಪ್ರಥಮ ಮಾದರಿ ಪೊಲೀಸ್ ಠಾಣೆ - ಗಬ್ಬೂರು




ಕೇಂದ್ರ ಗೃಹ ಇಲಾಖೆ ಇತ್ತೀಚೆಗೆ ಬಿಡುಗಡೆ ಮಾಡಿರುವ ಜನಸ್ನೇಹಿ ಪೊಲೀಸ್ ಠಾಣೆಗಳ ಪೈಕಿ ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ಗಬ್ಬೂರು ಪೊಲೀಸ್ ಠಾಣೆಯು ರಾಜ್ಯದಲ್ಲಿ ಪ್ರಥಮ ಮತ್ತು ದೇಶದಲ್ಲಿ 17 ನೇ ರ್‍ಯಾಂಕಿಂಗ್ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದೆ, ಈ ಜನಸ್ನೇಹಿ ಪೊಲೀಸ್ ಠಾಣೆ ಎಂಬ ಹೆಗ್ಗಳಿಕೆಗೆ ಪಾತ್ರರಾದ ಠಾಣೆಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳ ಕಾರ್ಯವನ್ನು ರಾಜ್ಯದ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು ಪ್ರಶಂಶಿಸಿ ನಗದು ಬಹುಮಾನ ನೀಡಿ ಗೌರವಿಸಿರುತ್ತಾರೆ.

## 2020ನೇ ಸಾಲಿನಲ್ಲಿ ನಿಧನರಾದ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳು

### ಶ್ರದ್ಧಾಂಜಲಿ



**ಶ್ರೀ ಸುಶಾಂತ್ ಮಹಾಪಾತ್ರ,** ಐ.ಪಿ.ಎಸ್.(ನಿ)
ಪೊಲೀಸ್ ಮಹಾನಿರ್ದೇಶಕರು

ಶ್ರೀಯುತರು ದಿ: 25.12.56 ರಂದು ಜನನ ಹೊಂದಿರುತ್ತಾರೆ. ದಿನಾಂಕ: 27.07.79 ರಂದು ಭಾರತೀಯ ಸೇವೆಗೆ ನೇರವಾಗಿ ಆಯ್ಕೆಯಾಗಿರುತ್ತಾರೆ. ಇವರು ವಿವಿಧ ದರ್ಜೆಗಳಿಗೆ ಮುಂಬಡ್ತಿ ಹೊಂದಿ ದಿನಾಂಕ: 31.12.2016 ರಂದು ಡೈರೆಕ್ಟರ್ ಜನರಲ್ ಆಫ್ ಪೊಲೀಸ್ & ಛೇರ್‌ಮನ್, ಕರ್ನಾಟಕ ಪೊಲೀಸ್ ಹೌಸಿಂಗ್ ಕಾರ್ಪೋರೇಷನ್, ಬೆಂಗಳೂರು ಹುದ್ದೆಯಲ್ಲಿ ಸೇವೆಯಿಂದ ವಯೋ ನಿವೃತ್ತಿ ಹೊಂದಿರುತ್ತಾರೆ. ಇವರು ಅನಾರೋಗ್ಯದಿಂದ ದಿನಾಂಕ: 17/07/2020 ರಂದು ಮೃತಪಟ್ಟಿರುತ್ತಾರೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

### ಶ್ರದ್ಧಾಂಜಲಿ



**ಶ್ರೀ ಚರಣ್ ರೆಡ್ಡಿ** ಐ.ಪಿ.ಎಸ್
ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು

ನಾನು ಮತ್ತು ಶ್ರೀ ಚರಣ್ ರೆಡ್ಡಿ ಇಬ್ಬರೂ 1993ನೇ ಸಾಲಿನಲ್ಲಿ ಒಂದೇ ದಿನ ಭಾರತೀಯ ಪೊಲೀಸ್ ಸೇವೆಗೆ ಸೇರ್ಪಡೆಯಾದೆವು. ಅಂದಿನಿಂದಲೂ ಶ್ರೀ ಚರಣ್ ರೆಡ್ಡಿ ರವರು ನನ್ನ ಆಪ್ತ ಗೆಳೆಯರಾಗಿದ್ದರು. ನಾನು ಅವರನ್ನು ತುಂಬಾ ಹತ್ತಿರದಿಂದ ಹಾಗೂ ವೈಯಕ್ತಿಕವಾಗಿ ನೋಡಿದ್ದೇನೆ. ನಾನು ಕಂಡಂತೆ ಶ್ರೀ ಚರಣ್ ರೆಡ್ಡಿ ಅವರು ತಮ್ಮ ಜೀವನದಲ್ಲಿ ಧ್ಯೇಯ, ಸಿದ್ಧಾಂತ, ನಿಸ್ವಾರ್ಥ ಮನೋಭಾವಗಳನ್ನು ಮೈಗೂಡಿಸಿಕೊಂಡಿದ್ದರು.

ಬಡವರು, ನಿರ್ಗತಿಕರು, ಅಶಕ್ತರು ಹಾಗೂ ಕಷ್ಟದಲ್ಲಿರುವವರನ್ನು ತನ್ನಂತೆಯೇ ಕಾಣುತ್ತಿದ್ದ ಶ್ರೀ ಚರಣ್ ರೆಡ್ಡಿ ರವರು ಒಬ್ಬ ಪರಿಪೂರ್ಣ ವ್ಯಕ್ತಿ. ಸಾಮಾಜಿಕ ನ್ಯಾಯ ಒದಗಿಸಲು ಹಾಗೂ ಭ್ರಷ್ಟಾಚಾರಗಳನ್ನು ನಿರ್ಮೂಲನೆ ಮಾಡಲು ಶ್ರಮಿಸಿದಂತಹ ವ್ಯಕ್ತಿ ಚರಣ್ ರೆಡ್ಡಿ ರವರು.

ಪೊಲೀಸ್ ಇಲಾಖೆ ಕಂಡ ಅತ್ಯಂತ ಉತ್ತಮ ಅಧಿಕಾರಿಯಾಗಿದ್ದ ಚರಣ್ ರೆಡ್ಡಿ ರವರು ಅಪರಾಧ ಪ್ರಕರಣಗಳ ತನಿಖೆಯಲ್ಲಿ ಅತ್ಯಂತ ನಿಪುಣರಾಗಿದ್ದರು. ಹಲವಾರು ಕ್ಲಿಷ್ಟಕರ ಪ್ರಕರಣಗಳ ತನಿಖೆಗಳನ್ನು ನಡೆಸಿ ಅಪರಾಧಿಗಳನ್ನು ಪತ್ತೆ ಮಾಡಿ, ಆರೋಪ ಸಾಬೀತು ಪಡಿಸಲು ಶ್ರಮವಹಿಸಿದ್ದರು. ಇವರು ಅನಾರೋಗ್ಯದಿಂದ ದಿನಾಂಕ 13/03/2020 ರಂದು ಮೃತಪಟ್ಟಿರುತ್ತಾರೆ. ಇಂತಹ ಅತ್ಯುತ್ತಮ ವ್ಯಕ್ತಿ. ನಮ್ಮೆಲ್ಲರನ್ನು ಅಗಲಿರುವುದು ಪೊಲೀಸ್ ಇಲಾಖೆಗೆ ಹಾಗೂ ನಮ್ಮೆಲ್ಲ ಅಧಿಕಾರಿ ವರ್ಗಕ್ಕೆ ತುಂಬಲಾರದ ನಷ್ಟ ಎಂದೇ ಹೇಳಬಹುದು.

ಅವರು ಇಂದು ನಮ್ಮೊಂದಿಗೆ ಇಲ್ಲ. ಇದು ಅತ್ಯಂತ ದುಃಖದ ಸಂಗತಿ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ನಾನು ಹಾರೈಸುತ್ತೇನೆ ಹಾಗೂ ಅವರ ಅಗಲಿಕೆಯನ್ನು ಸಹಿಸಿಕೊಳ್ಳುವ ಶಕ್ತಿ-ಸಾಮರ್ಥ್ಯಗಳನ್ನು ಅವರ ಕುಟುಂಬ ವರ್ಗದವರಿಗೆ ದೇವರು ಕರುಣಿಸಲೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಡಾ|| ಎಂ. ಎ. ಸಲೀಂ, ಐ.ಪಿ.ಎಸ್.**
ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು,
ಆಡಳಿತ, ಬೆಂಗಳೂರು.

## ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿ ಕೋವಿಡ್ -19 ನಿಂದ ಹುತಾತ್ಮರಾದ 38 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಶ್ರದ್ಧಾಂಜಲಿ

(ದಿ: 01/05/2020 ರಿಂದ 25/08/2020 ರ ಅಂತ್ಯಕ್ಕೆ)

| | ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳ ವಿವರಗಳು / ವೃಂದ (ಶ್ರೀಯುತರುಗಳು) | ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ಠಾಣೆ |
|---|---|---|
| 1. | ನಾಗರಾಜು, ಪಿಎಸ್ಐ | ಪೊಲೀಸ್ ಆಯುಕ್ತರ ಕಛೇರಿ, ಬೆಂಗಳೂರು ನಗರ |
| 2. | ಶಿವಣ್ಣ, ಎಎಸ್ಐ | ವಿ.ವಿ.ಪುರಂ ಸಂಚಾರ ಪೊಲೀಸ್ ಠಾಣೆ, ಬೆಂಗಳೂರು ನಗರ |
| 3. | ಕಲಕಯ್ಯ ಜಿ ಹಿರೇಮಠ್, ಎಎಸ್ಐ | ವಿಲ್ಸನ್‌ಗಾರ್ಡನ್ ಸಂಚಾರ ಪೊಲೀಸ್ ಠಾಣೆ, ಬೆಂಗಳೂರು ನಗರ |
| 4. | ಮಂಜುನಾಥ.ಜಿ, ಎಎಸ್ಐ | ವೈಟ್‌ಫೀಲ್ಡ್ ಪೊಲೀಸ್ ಠಾಣೆ, ಬೆಂಗಳೂರು ನಗರ |
| 5. | ವೆಂಕಟೇಶ್, ಎಎಸ್ಐ | ವಿಧಾನಸೌಧ ಭದ್ರತೆ ಪೊಲೀಸ್ ಠಾಣೆ, ಬೆಂಗಳೂರು ನಗರ |
| 6. | ಸಿದ್ದಲಿಂಗಯ್ಯ, ಎಎಸ್ಐ | ಕಾಟನ್ ಪೇಟೆ ಪೊಲೀಸ್ ಠಾಣೆ, ಬೆಂಗಳೂರು ನಗರ |
| 7. | ಗಿರಿಯಪ್ಪನವರ್, ಎಎಸ್ಐ | ವಿದ್ಯಾನಗರ ಪೊಲೀಸ್ ಠಾಣೆ, ಹುಬ್ಬಳ್ಳಿ -ಧಾರವಾಡ ನಗರ |
| 8. | ವಿನಾಯಕ್ ಕಟಗಿ, ಎಎಸ್ಐ | ಡಿಎಸ್‌ಬಿ ಶಾಖೆ, ಎಸ್‌ಪಿ ರವರ ಕಛೇರಿ, ಧಾರವಾಡ |
| 9. | ಮಂಜುನಾಥ್, ಎಎಸ್ಐ | ಶ್ರೀನಿವಾಸಪುರ ಪೊಲೀಸ್ ಠಾಣೆ, ಕೋಲಾರ ಜಿಲ್ಲೆ |
| 10. | ಹೆಚ್.ವಿ. ಕಡಗಾಳಿ, ಎಎಸ್ಐ | ಬೀಳಗಿ ಪೊಲೀಸ್ ಠಾಣೆ, ಬಾಗಲಕೋಟೆ ಜಿಲ್ಲೆ |
| 11. | ಪರಮೇಶ್ವರಪ್ಪ, ಕೆ.ಜಿ, ಎಎಸ್ಐ | ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ |
| 12. | ಲಕ್ಷ್ಮಿನಾರಾಯಣ ಪ್ರಸಾದ್, ಎಎಸ್ಐ | ರಾಬರ್ಟ್‌ಸನ್ ಪೊಲೀಸ್ ಠಾಣೆ, ಕೆಜಿಎಫ್ |
| 13. | ಸುಗ್ಗಪ್ಪ, ಎಎಸ್ಐ | ಮಾನ್ವಿ ಪೊಲೀಸ್ ಠಾಣೆ, ರಾಯಚೂರು ಜಿಲ್ಲೆ |
| 14. | ಡಿ.ವಾಸುದೇವ, ಎಆರ್‌ಎಸ್ಐ | ಸಿಎಆರ್, ದಕ್ಷಿಣ, ಬೆಂಗಳೂರು ನಗರ |
| 15. | ರಮೇಶ್ ಹೆಚ್‌ವಿ, ಎಆರ್‌ಎಸ್ಐ | ಡಿಎಆರ್, ಮೈಸೂರು ಜಿಲ್ಲೆ |
| 16. | ವೆಂಕಟೇಶ್, ಎಆರ್‌ಎಸ್ಐ | ಡಿಎಆರ್, ರಾಯಚೂರು ಜಿಲ್ಲೆ |
| 17. | ಸೈಯದ್ ರಫೀಕ್, ಹೆಚ್‌ಸಿ- 361 | ಸಿಐಡಿ, ಬೆಂಗಳೂರು |
| 18. | ರತ್ನಯ್ಯ, ಸಿಹೆಚ್‌ಸಿ-112 | ಉರಿಗಾಂ ಪೊಲೀಸ್ ಠಾಣೆ, ಕೆಜಿಎಫ್ ಜಿಲ್ಲೆ |
| 19. | ರವಿಕುಮಾರ್, ಹೆಚ್‌ಸಿ-111 | ಅರಸೀಕೆರೆ ಪೊಲೀಸ್ ಠಾಣೆ, ಹಾಸನ ಜಿಲ್ಲೆ |
| 20. | ಶಿವರಾಜ್, ಎಹೆಚ್‌ಸಿ-29 | ಮಲೇಬೆನ್ನೂರು ಪೊಲೀಸ್ ಠಾಣೆ, ದಾವಣಗೆರೆ |
| 21. | ರಮೇಶ್.ಎಮ್, ಎಹೆಚ್‌ಸಿ-386 | ಸಿಎಆರ್, ಕೇಂದ್ರ, ಬೆಂಗಳೂರು ನಗರ |
| 22. | ಗುರುರಾಜ್, ಎಹಚ್‌ಸಿ - 18618 | ಸಿಎಆರ್, ಉತ್ತರ, ಬೆಂಗಳೂರು ನಗರ |
| 23. | ವೆಂಕಟಸ್ವಾಮಿ, ಎಹೆಚ್‌ಸಿ-160 | ಸಿಎಆರ್, ಉತ್ತರ, ಬೆಂಗಳೂರು ನಗರ |
| 24. | ನರಸಿಂಹ ಮೂರ್ತಿ, ಸಿಹೆಚ್‌ಸಿ-165 | ಓಓಡಿ ಫಾರೆಸ್ಟ್ ಮೊಬೈಲ್ ಸ್ಕ್ವಾಡ್, ಮೈಸೂರು ಜಿಲ್ಲೆ |
| 25. | ಮೌರ್ಯ, ಸಿಹೆಚ್‌ಸಿ-7170 | ಶಂಕರಪುರಂ ಪೊಲೀಸ್ ಠಾಣೆ, ಬೆಂಗಳೂರು ನಗರ |
| 26. | ಮಹಾಲಿಂಗ, ಸಿಹೆಚ್‌ಸಿ-05 | ಕೆ.ಆರ್.ಪೇಟೆ ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ |
| 27. | ಬಸವರಾಜು ಬಸಪ್ಪ ನಾಯಕರ್, ಸಿಹೆಚ್‌ಸಿ-722 | ಹಿರೇಕೆರೂರು ಪೊಲೀಸ್ ಠಾಣೆ, ಹಾವೇರಿ ಜಿಲ್ಲೆ |
| 28. | ಶಿವಾನಂದ ಲಂಬಾಣಿ, ಹೆಚ್‌ಸಿ-1047 | ಘಂಟಿಕೇರಿ ಪೊಲೀಸ್ ಠಾಣೆ, ಹುಬ್ಬಳ್ಳಿ -ಧಾರವಾಡ ನಗರ. |
| 29. | ಕೃಷ್ಣ, ಸಿಹೆಚ್‌ಸಿ-145 | ಹೊಸಪೇಟೆ ಗ್ರಾಮಾಂತರ ಪೊಲೀಸ್ ಠಾಣೆ, ಬಳ್ಳಾರಿ ಜಿಲ್ಲೆ |
| 30. | ರಾಘವೇಂದ್ರ, ಸಿಹೆಚ್‌ಸಿ-315 | ಗ್ರಾಮಾಂತರ ಪೊಲೀಸ್ ಠಾಣೆ, ರಾಯಚೂರು ಜಿಲ್ಲೆ |
| 31. | ವೇಣುಗೋಪಾಲ್, ಹೆಚ್‌ಸಿ-36 | ಸೆನ್ ಪೊಲೀಸ್ ಠಾಣೆ, ಕೋಲಾರ |
| 32. | ಮಂಜೇಶ್, ಎಹೆಚ್‌ಸಿ-113 | 4ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು |
| 33. | ಅಖಿಲಾಂಡ ಸ್ವಾಮಿ ಮಠ್, ಹೆಚ್‌ಸಿ-210 | 1ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು |
| 34. | ಹೊನ್ನೂರು ಸ್ವಾಮಿ, ಎಹೆಚ್‌ಸಿ-62 | ಡಿಎಆರ್, ಬಳ್ಳಾರಿ |
| 35. | ಮೊಹಮ್ಮದ್ ಐಸಾಕ್, ಎಪಿಸಿ | ಡಿಸಿಆರ್‌ಇ, ವಿಜಯಪುರ |
| 36. | ರಾಮಮೋಹನ್, ಸಿಪಿಸಿ-894 | ಗಾಂಧಿನಗರ ಪೊಲೀಸ್ ಠಾಣೆ, ಬಳ್ಳಾರಿ ಜಿಲ್ಲೆ |
| 37. | ರವೀಂದ್ರ, ಸಿಪಿಸಿ-1100 | ಖಟಕಚಿಂಚೋಳಿ ಪೊಲೀಸ್ ಠಾಣೆ, ಬೀದರ್ ಜಿಲ್ಲೆ |
| 38. | ರವಿ, ಸಿಪಿಸಿ-108 | ಹುಣಸೂರು ನಗರ ಪೊಲೀಸ್ ಠಾಣೆ, ಮೈಸೂರು ಜಿಲ್ಲೆ |

ಮೇಲ್ಕಂಡ ಅಧಿಕಾರಿ/ಸಿಬ್ಬಂದಿಗಳ ಆತ್ಮಕ್ಕೆ ಶಾಂತಿ ಸಿಗಲೆಂದು ಹಾರೈಸುತ್ತಾ, ಅವರುಗಳ ಅಗಲಿಕೆಯನ್ನು ಸಹಿಸಿಕೊಳ್ಳುವ ಶಕ್ತಿ-ಸಾಮರ್ಥ್ಯಗಳನ್ನು ಅವರ ಕುಟುಂಬ ವರ್ಗದವರಿಗೆ ದೇವರು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಪರಿಕಲ್ಪನೆ:

**ಡಾ|| ಎಂ. ಎ. ಸಲೀಂ, ಐ.ಪಿ.ಎಸ್.**
ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು,
ಆಡಳಿತ, ಬೆಂಗಳೂರು.





**ಶ್ರೀ ಕೆ.ವಿ. ಶರತ್ ಚಂದ್ರ, ಐ.ಪಿ.ಎಸ್.**
ಆರಕ್ಷಕ ಮಹಾನಿರೀಕ್ಷಕರು,
ಆಡಳಿತ, ಬೆಂಗಳೂರು.